




if not delivered please return to :

ವಿಳಾಸ :
ನೂಪುರ ಭ್ರಮರಿ,
'ಸಾನ್ನಿಧ್ಯ' ಪ್ರಕಾಶನ,
ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ,
ಮಡಿಕೇರಿ, ಕೊಡಗು – 571201

ಫೋನ್ ನಂ : 9964140927

ವೆಬ್‌ಸೈಟ್ :
www.noopurabhramari.com

ಇ-ಮೈಲ್ ವಿಳಾಸ :
feedback@noopurabhramari.com


ಆಶ್ವಯುಜ – ಕಾರ್ತಿಕ

# ನೂಪುರ ಭ್ರಮರಿ

ನರ್ತನ ಜಗತ್ತಿಗೊಂದು ಪರಿಭ್ರಮಣ



## ಶರದ್ ಸಂಭ್ರಮ

ಅಶ್ವಯುಜ– ಕಾರ್ತಿಕ

ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

ಸಂಪುಟ ೨
ಸಂಚಿಕೆ ೫

*ಖಾಸಗಿ ಪ್ರಸಾರದ ದ್ವೈಮಾಸಿಕ, ಸಂಪಾದಕಿ : ಮನೋರಮಾ ಬಿ. ಎನ್*

**ಈ** ಮಾಸ ನವರಾತ್ರಿ ದೀಪಾವಳಿಗಳ ಪರ್ವಕಾಲ. ಹತ್ತು ದಿನಗಳ ಪರ್ಯಂತ ನಮ್ಮ ದುರ್ಗೆಯ ನಾನಾ ರೂಪಗಳನ್ನು ಪೂಜಿಸುತ್ತಾ ನಮ್ಮಲ್ಲಿನ ಐಕ್ಯತೆಯನ್ನು ಮೆರೆದು, ಸಂಗೀತ–ನೃತ್ಯ–ನಾಟಕ ಮುಂತಾದ ಲಲಿತಕಲೆಗಳತ್ತ, ಸಾಹಿತ್ಯ–ಸಂಸ್ಕೃತಿಗಳತ್ತ ನೋಟ ಬೀರುವ ನಾಡಹಬ್ಬದ ಸಂಭ್ರಮದಲ್ಲಿ ಈ ಸಂಚಿಕೆಯನ್ನು ಗೋಪಾಲಕೃಷ್ಣರಾಯರ ಕುಮಾರ ಕೃಪ ಕವನ ಸಂಕಲನದಿಂದಾಯ್ದ 'ನೃತ್ಯಕಾಳಿ' ಕವನದ ಮೂಲಕ ಓದೋಣವೇ?

• • • • • • • • • • • •

**ನ**ರ್ತಿಸಿದಳು ಕಾಳಿ, ರೌ–
ದ್ರಾವತಾರ ತಾಳಿ

ಕಾಳಿಯ ಲಯಲೀಲೆಗೆ ಈ
ಸೃಷ್ಟಿ ನೃತ್ಯಶಾಲೆ

ಶಿವನ ದೇಹ ಮೆಟ್ಟಿ, ಭು–
ವ್ಯೋಮವನ್ನೆ ಮುಟ್ಟಿ
ಕಾರ ಮುಗಿಲ ಕುರುಳ, ತ–
ನ್ನೆಲ್ಲ ದೆಸೆಗು ಕವಿಸಿ
ಕಾಲಗೆಜ್ಜೆ ದನಿಗೆ, ಬಿರು–
ಗಾಳಿ ಸಿಡಿಲು ಗುಡುಗೆ
ಕಣ್ಣನೋಟ ಸುಳಿಸಿ, ಸುಳಿ
ಮಿಂಚಿನೆಳೆಯ ಹರಿಸಿ
ಖಡ್ಗ ಕೈಯೊಳಿರಿಸ್, ತಾ
ರುಂಡಮಾಲೆ ಧರಿಸಿ
ನರ್ತಿಸುತ್ತಲಿರಲು, ಇದೊ
ತತ್ತರಿಸಿತು ಜಗವು
ನೃತ್ಯವಿದನು ನಿಲಿಸೆ, ನೀ
ಸೌಮ್ಯರೂಪ ಸರಿಸೆ
ಮೊಗಕೆ ನಗೆಯ ತಾರೆ, ಸಂ–
ಮೋದವಿಳೆಗೆ ಬೀರೆ
ಜಗನ್ಮಾತೆ ಲಲಿತೆ, ಸತ್
ಚಿದಾನಂದ ಭರಿತೆ
ಕೃಪಾರಸವ ಸುರಿಸೆ, ನೀ–
ನಿಳೆಗೆ ಶಾಂತಿ ಸಲಿಸೆ
ದೇವಿ ಆದಿ ಶಕ್ತಿ ನಾ
ನಿನ್ನೊಳಿರಿಸಿ ಭಕ್ತಿ
ಮಣಿಯುತಿರುವೆ ತಾಯೆ, ಶ್ರೀ
ಗೋಪಸಹಜೆ ಕಾಯೆ





# ಮಂಜೀರ

**ಸಾಂ**ಸ್ಕೃತಿಕ ರಂಗಕ್ಕೂ ಸಮೂಹ ಮಾಧ್ಯಮಕ್ಕೂ ಅವಿನಾಭಾವ ಸಂಬಂಧ ಇಂದು ನಿನ್ನೆಯದಲ್ಲ. ಸಂಸ್ಕೃತಿ ಮತ್ತದರ ಚಲನೆಯಲ್ಲಿನ ವೈಶಿಷ್ಟ್ಯಗಳು, ವ್ಯತ್ಯಾಸಗಳನ್ನು ಗಮನಿಸುತ್ತಾ, ದಾಖಲಿಸುತ್ತ ಬಂದಿರುವ ಸಮೂಹ ಮಾಧ್ಯಮಗಳು ಕಲೆಯ ಮುನ್ನಡೆಯಲ್ಲಿ ಕಾಣ್ಕೆ ಇತ್ತಿದ್ದು ಕಡಿಮೆಯೇನಲ್ಲ. ಇಂತಹ ದಾಖಲೆಗಳ ಒಳನೋಟ, ವಾರೆನೋಟ ಸಾಂಸ್ಕೃತಿಕ ರಂಗದ ಒಪ್ಪು ತಪ್ಪುಗಳನ್ನು ತಿದ್ದಿ–ತೀಡಿ, ಹೊಸತು ಅನ್ವೇಷಣೆಯ ಪ್ರವರ್ತಕರಾಗುವಲ್ಲಿ ಹಿಂದಿನ ಬೆನ್ನುಡಿಗಳಾಗಿ ಮುನ್ನಡೆಯಲು ಮಾಧ್ಯಮಗಳು ಸಹಕರಿಸದೇ ಇರುತ್ತಿದ್ದರೆ, ಇಂದು ಅದೆಷ್ಟೋ ರಂಗದ ಹಾದಿಯ ಮೈಲಿಗಲ್ಲುಗಳು ಕಣ್ಮರೆಯಾಗಿಬಿಡುತ್ತಿದ್ದವೇನೋ! ಅಷ್ಟರಮಟ್ಟಿಗೆ ಸಮೂಹ ಮಾಧ್ಯಮ ಕಲೆಯ ಆವರಣ ಮತ್ತು ಹೂರಣವನ್ನು ಅರ್ಥೈಸಿಕೊಳ್ಳುವಲ್ಲಿ, ಹರಿವು ಹೆಚ್ಚಿಸುವಲ್ಲಿ, ಹಬ್ಬಿಸುವಲ್ಲಿ ಅರಿವಿನ ಕಿಚ್ಚು ಹಚ್ಚಿದೆ. ಕಲೆಯ ಅನಿವಾರ್ಯ ಅಂಗವೇನೋ ಎಂಬಂತೆ ಅದರ ದೇಹದ ಒಂದು ಭಾಗವಾಗಿ ಬಿಟ್ಟಿದೆ. ವಿಚಾರ–ವಿಮರ್ಶೆ–ವಿನಿಮಯದ ಮೂಲಕ ಮನರಂಜನೆಯನ್ನಷ್ಟೇ ಅಲ್ಲದೆ ಮಾಹಿತಿ, ಶಿಕ್ಷಣವನ್ನು ಪಸರಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಬಹಳಷ್ಟು ದೊಡ್ಡದು.

ಆದರೆ ಇತ್ತೀಚೆಗಿನ ಮಾಧ್ಯಮಗಳಲ್ಲಿ ಕಂಡುಬರುವ ಕಲೆಯ ಕುರಿತಾದ ವಿಚಾರ ವಿಮರ್ಶೆಗಳು, ಕಾರ್ಯಕ್ರಮಗಳು ಕಲೆಯ ಬಗೆಗಿನ ವ್ಯಾಖ್ಯೆ–ನಂಬಿಕೆಗಳನ್ನೇ ಬದಲು ಮಾಡುವಂತಿದೆಯೆಂಬ ಮಾತಿದ್ದರೆ ಅದರಲ್ಲೂ ಸತ್ಯವಿದೆ. ಉತ್ತಮ ಗುಣಮಟ್ಟದ ಕಲೆಯ ಕುರಿತಾದ ಪ್ರಯತ್ನಗಳ ಅಭಾವವೋ, ವಿಮರ್ಶಕರ–ಬರಹಗಾರರ ಕೊರತೆಯೋ ಅಥವಾ ಬದಲಾದ ಪ್ರೇಕ್ಷಕರ ಮನಸ್ಥಿತಿ ಎಂಬ ತರ್ಕವೊಡ್ಡುವ ಕುಂಟು ನೆವವೋ, ಟಿಆರ್‌ಪಿ ಪಾಯಿಂಟ್‌ಗಳಿಗೆ ಪರಿತಪಿಸುವ ಪ್ರಯಾಸವೋ...ಒಟ್ಟಿನಲ್ಲಿ ಮಾಧ್ಯಮಗಳಲ್ಲಿ ಕಲೆಯ ಕುರಿತಾದ ಸಾಂಪ್ರದಾಯಿಕ ಮನೋಭಾವಗಳಿಗೇಕೋ ತಡೆ ಬಿದ್ದಿದೆ.

ವಿಪರ್ಯಾಸವೆಂದರೆ, ಇತ್ತೀಚೆಗೆ ತೀರಾ ಕಮರ್ಷಿಯಲ್ ಆದ ಕೆಲವು ಚಾನಲ್‌ಗಳು ಹಿಂದೊಮ್ಮೆ ನಮ್ಮ ನಾಡಿನ ಕಲೆಯ ಕುರಿತಾಗಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿತ್ತು! ಆದರೆ ಬರಬರುತ್ತಾ ರಿಯಾಲಿಟಿ ಶೋ, ಧಾರಾವಾಹಿ, ಕ್ರೈಂಸ್ಟೋರಿ, ಸಿನೆಮಾ, ಪಾರ್ಟಿ ಸಂಸ್ಕೃತಿಗಳಷ್ಟೇ ಮನರಂಜನೆಯ ಸಾಧನಗಳು ಎಂಬ ಅಘೋಷಿತ ನಂಬಿಕೆಯಿಂದಾಗಿ ಸಂಗೀತ, ನೃತ್ಯದಂತಹ ಸದಭಿರುಚಿಯ ಪ್ರಯತ್ನಗಳಿಗೆ ತೆರೆ ಬಿತ್ತು. ಅಲ್ಲೊಂದು ಇಲ್ಲೊಂದು ಎಂಬಂತೆ ಕಲೆಯ ಕುರಿತ ಭಾವಗಳಿಗೆ, ಕಲಾವಿದರಿಗೆ ಸ್ಪಂದನೆ ಸಿಕ್ಕುವುದು ಬಿಟ್ಟರೆ ಉಳಿದೆಲ್ಲಾ ಸಂದರ್ಭಗಳಲ್ಲೂ ಶಾಸ್ತ್ರೀಯ–ಜನಪದ ನೃತ್ಯ ಸಂಗೀತಗಳು ಕೇವಲ ಹಬ್ಬದ, ವಾರ್ಷಿಕೋತ್ಸವ ಸಂದರ್ಭದ ಆಚರಣೆಗಳಿಗೆ ಸೀಮಿತ. ಅಷ್ಟೇ !

ಪತ್ರಿಕಾ ರಂಗದಲ್ಲೂ ಕೇವಲ ಕೆಲವೇ ಪತ್ರಿಕೆಗಳು ಕಲೆಯ ಕುರಿತಾಗಿನ ಸಾಧ್ಯತೆಗಳಿಗೆ ಕಿಟಕಿ ತೆರೆಯುತ್ತವೆಯೇ ಹೊರತು, ಅದರ ಪರಿಧಿಯನ್ನು ಹಿಗ್ಗಿಸುವಲ್ಲಿ ಹಿಂದೇಟು ಹಾಕುವುದೇ ಹೆಚ್ಚು. ಒಂದು ವೇಳೆ ಅಂತಹ ಬರಹಗಳು ಕಂಡು ಬಂದರೂ ವಿಮರ್ಶೆ-ವಿಚಾರದ ಬದಲು, ವಿನಾಕಾರಣ ಹೊಗಳಿಕೆಯ ಮಾತುಗಳಾಗಿ ; ಕಲೆಯೊಂದು ಬೇಡುವ ಒಳಗಿನ ಸತ್ವ, ದನಿಗೆ ತೆರೆದುಕೊಳ್ಳದಿರುವುದೂ ವಿಷಾದನೀಯ. ಕೇವಲ ಹಣದಿಂದಲೇ ಎಲ್ಲವನ್ನೂ ತೂಗಿ ನೋಡುವ 'ಸಂಸ್ಕೃತಿ' ಸಾಂಸ್ಕೃತಿಕ ಸಂದರ್ಭಗಳನ್ನು ಕಟ್ಟಿಹಾಕುತ್ತಿರುವುದು ಮತ್ತು ಒಂದು ವೇಳೆ ಅಂತಹ ಕೆಲವೇ ಕೆಲವು ಪ್ರಯತ್ನಗಳಿದ್ದರೂ, ಅವು ಪ್ರೋತ್ಸಾಹವಿಲ್ಲದೇ ಸೊರಗುತ್ತಿರುವುದು ದುರದೃಷ್ಟ. ಆದ್ದರಿಂದಲೋ ಏನೋ, ಸಾಂಸ್ಕೃತಿಕ ಪತ್ರಿಕೋದ್ಯಮದ ಅಸ್ತಿತ್ವದ ಬಗ್ಗೆ ಸಂಶಯಗಳು ದಟ್ಟವಾಗಿ ಹಬ್ಬುತ್ತಿವೆ ; ಮಾತ್ರವಲ್ಲ, ಈ ವೈಶಿಷ್ಟ್ಯಮಯ ಪತ್ರಿಕೋದ್ಯಮ ದಿನೇದಿನೇ ಬಿಗಡಾಯಿಸಿಕೊಳ್ಳುತ್ತಿದೆ. ಪರಿಣಾಮ ಅದೆಷ್ಟೋ ಸಾಂಸ್ಕೃತಿಕ ಪತ್ರಿಕೆಗಳು ಹೇಳ ಹೆಸರಿಲ್ಲದಂತೆ ತೆರೆಗೆ ಸರಿದಿದೆ, ಅಂತೆಯೇ ರಾಜ್ಯ ಮಟ್ಟದ ಪತ್ರಿಕೆಗಳೂ ಕಲೆಯ ಕುರಿತ ಪುರವಣಿಗಳನ್ನು ಮರೆತಾಗಿದೆ.

ಈ ಕಾಲಘಟ್ಟದಲ್ಲಿ ಇಂದಿಗೂ ಕನ್ನಡ ದೂರದರ್ಶನ 'ಚಂದನ'ದ ಕಲೆಯ ಕುರಿತಾದ ಪ್ರೀತಿ ಸ್ಮರಣೀಯವೆನಿಸಿಕೊಳ್ಳುವುದು ಇದಕ್ಕೇ ! ನೃತ್ಯ-ಸಂಗೀತದ ಆಡಿಷನ್‌ಗಳು, ಕಾರ್ಯಕ್ರಮ ಸ್ವಲ್ಪ ಮಟ್ಟಿಗಾದರೂ ಪರಂಪರೆಯನ್ನು ನೋಡಿಕೊಳ್ಳುವಲ್ಲಿ, ಸೃಷ್ಟಿಶೀಲತೆಯನ್ನು ಮನಗಾಣಿಸುವಲ್ಲಿ ತನ್ನಿಂದಾದ ಕಾಣಿಕೆ ಕೊಡುತ್ತಿದೆ. ಬಹುಷಃ ಚಂದನ ಪ್ರಸಾರ ಭಾರತಿಯ ಮೇಲ್ವಿಚಾರಣೆಯಲ್ಲಿ ಉಳಿದದ್ದಕ್ಕೋ, ನಿರ್ದಿಷ್ಟ ನೀತಿ ನಿಯಮಗಳ ಅಡಿಯಲ್ಲಿ ಕರ್ತವ್ಯ ನಿರ್ವಹಿಸುವ ಕಾರಣಕ್ಕೋ ಈ ಪ್ರೀತಿ ಉಳಿದದ್ದಿರಬೇಕು! ಇಲ್ಲವಾದಲ್ಲಿ, ಉಳಿದವುಗಳಂತೆ ನೃತ್ಯ-ಸಂಗೀತಗಳು ಕೇವಲ ವಾರ್ತೆ ಓದುವವರ ತುಟಿಯ ಮೇಲಣ ಮಾತಾಗುತ್ತಿತ್ತು. ಆದರೂ ಇಂತಹ ಕಾರ್ಯಕ್ರಮಗಳು ಸಂಜೆಯ ಹೊತ್ತಿಗೆ ಆಯಾಸ ಮರೆಸಿ ಆಹ್ಲಾದ ಕೊಡುವದರ ಬದಲಿಗೆ ಗೂಬೆ ಕೂಗುವ ಮಧ್ಯರಾತ್ರಿಯೋ, ಮಟಮಟ ಮಧ್ಯಾಹ್ನವೋ ಪ್ರಸಾರವಾಗಿ ಮಹತ್ವ ಕಳೆದುಕೊಳ್ಳುತ್ತಿರುವುದನ್ನು ನೋಡಿದರೆ, ಕಲಾವಿದರ 'ಗ್ರೇಡ್'ಗಳನ್ನು ತುಂಬಿಸಿಕೊಳ್ಳುವ ಪ್ರತಿಷ್ಠೆಯ ದಾಹಕ್ಕೆ, ರಾಜಕೀಯಕ್ಕೆ ನೀರೆರೆಯುತ್ತಿದೆಯೇನೋ ಎಂಬ ಸಂಶಯ ಬರದೇ ಉಳಿಯುವುದಿಲ್ಲ!

ಮಾಧ್ಯಮಗಳು ಕಲೆಯೆಂಬ ಜೀವನ ಅನುಭೂತಿಯ ವಾಹಕಗಳು. ಬದುಕು ಅರ್ಥಪೂರ್ಣವಾಗುವಲ್ಲಿ ಮಾಧ್ಯಮಗಳು ಇನ್ನೊಂದಷ್ಟು ಪ್ರೀತಿಯಿಟ್ಟಲ್ಲಿ ಕಲೆ ಕಡೆಗಣಿಸಲ್ಪಡುವುದಿಲ್ಲ. ಜೀವನ ಕೊಳೆಯಾಗುವುದಿಲ್ಲ.

ಪ್ರೀತಿಯಿಂದ

✍ *ಸಂಪಾದಕಿ*

**manorama@noopurabhramari.com**





**ಅಂಗಳದ ಮಾತು**

**ತಿಂಗಳ ಚರ್ಚೆ**

**ಮಂ**ಜೀರದಲ್ಲಿ ತಿಳಿಸಿದಂತೆ ಭಾರತಕ್ಕೆ ಲಲಿತಕಲೆಗಳ ಸಾಂಪ್ರದಾಯಿಕ ಗುರುಪರಂಪರೆ ಯೊಂದಿಗೆ ಕಾಲಘಟ್ಟದ ಡಿಗ್ರಿ, ಸರ್ಟಿಫಿಕೇಟುಗಳ ಮಾನ್ಯತೆಯೂ ಬೇಕು ಎಂಬುದು ನನ್ನ ಅಭಿಪ್ರಾಯ.

ಚೂರ್ಣಿಕೆ ಸಂಸ್ಕೃತದಲ್ಲಿ ಮಾತ್ರವಲ್ಲ, ಪ್ರಾದೇಶಿಕ ಭಾಷೆಗಳಲ್ಲೂ ದೇವರ, ಆಶ್ರಯದಾತರ ಹೊಗಳಿಕೆಯಾಗಿ; ವೈಷ್ಣವಿ ಎನ್. ಅವರು ಹೇಳಿದ ಸಂದರ್ಭಗಳಲ್ಲಿಯೂ ರೂಢಿಯಲ್ಲಿವೆ. ವಚನಗಳೂ ಪದ್ಯಗಂಧಿ ಗದ್ಯ ಸಾಹಿತ್ಯ.

ರಾಗ, ತಾಳ, ಸಂಗೀತ ಅಳವಡಿಸಿ, ಜೀವನದ ಹಲವು ಅನುಭವ ಗಳನ್ನು ನೃತ್ಯಗಾರರು ಅಭಿನಯಿಸುತ್ತಾರೆ. ಇದು ವೈಜಯಂತಿ ಕಾಶಿ ಅವರು ಹೇಳಿದಂತೆ ಕಲಾವಿದರು ಬೆಳೆಸಿಕೊಳ್ಳುವ ಆಯಾಮಗಳು.

ಮುದ್ರೆಗಳ ಲಕ್ಷಣವನ್ನು ಬೇರೆಬೇರೆ ಕಡೆಗಳಿಂದ ಸಂಗ್ರಹಿಸಿ, ವಿಸ್ತರಿಸಿ ಹೆಚ್ಚಿನ ಓದಿಗೆ-ತಿಳಿವಳಿಕೆಗೆ ದಾರಿಯಾಗುತ್ತದೆ ತಮ್ಮ ಕೊಡುಗೆ. ಪುಂಡರೀಕ ವಿಠಲನ ಸಂಗೀತ ನೃತ್ಯಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ರಾ. ಸತ್ಯನಾರಾಯಣರು ಅನುವಾದ, ವ್ಯಾಖ್ಯಾನ ಮಾಡಿ ಪುಂಡರೀಕ ಮಾಲಾ ಎಂಬ ಹೆಸರಿನಲ್ಲಿ ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯದ ವತಿಯಿಂದ ೧೯೮೬ರಲ್ಲಿ ಪ್ರಕಟವಾಗಿದೆ, ಎಂಬ ಸಮಾಚಾರ ಓದುವ ಮುಂದಿಗೆ ಮುಖ್ಯವಾಗಿದೆ.

ಏರ್ಯ ಲಕ್ಷ್ಮೀನಾರಾಯಣ ಆಳ್ವರ ಮುಗಿಲು ನಾಟ್ಯವಾಡಿತು ಕವನವು ವರ್ಷ ಋತುವಿನ ಸಂಚಿಕೆಗೆ, ಋತುವಿನ ಸಂದರ್ಭಕ್ಕೆ ಬಹಳ ಸೂಕ್ತವಾಗಿ ಹೊಂದಿತ್ತು.

**— ವಿದ್ವಾನ್ ಕುದ್ಕಾಡಿ ವಿಶ್ವನಾಥ ರೈ**
**ವಿಶ್ವಕಲಾನಿಕೇತನ, ಪುತ್ತೂರು, ದ.ಕ**

# ಪ್ರಕಟಣೆ

ನೃತ್ಯ ಪದ್ಧತಿಯಲ್ಲಿ ಚಾಲ್ತಿಯಲ್ಲಿರುವ ಮತ್ತು ಈಗಾಗಲೇ ಸಾಕಷ್ಟು ಮರೆಯಾಗಿರುವ ನೃತ್ಯ ಸಂಬಂಧೀ ಅಡವುಗಳ ಬಗ್ಗೆ ಮಾಹಿತಿಗಳು, ಚಿತ್ರಗಳು, ವಿವರಣೆಗಳು ಬೇಕಾಗಿವೆ. ತಮ್ಮಲ್ಲಿರುವ ಮಾಹಿತಿಯನ್ನು ನೀಡುವುದಾದಲ್ಲಿ ನೂಪುರ ಭ್ರಮರಿ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ. ಮತ್ತು ಮುಂಬರುವ ದಿನಗಳಲ್ಲಿ ಅಡವುಗಳ ಬಗೆಗಿನ ಸವಿಸ್ತಾರ ಪರಿಚಯದಲ್ಲಿ ಆ ಲೇಖನಗಳನ್ನು ಪ್ರಕಟಿಸಲಾಗುವುದು.

# ಗೀತೆಗಳ ಅನ್ತಃಪುರವಿದು !...

**ಏನೀ ಮಹಾನಂದವೇ...** — **'ಮನೂ' ಬನ**

ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗ ಮುಂತಾದ ಜನಮಾನಸದಲ್ಲಿ ನಲಿದಾಡುವ ವಿಶಿಷ್ಟ ಕಾವ್ಯವನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆ ಕೊಡುವುದರೊಂದಿಗೆ ಬೇಲೂರಿನ ವಿಶ್ವವಿಖ್ಯಾತ ಶಿಲ್ಪ ಸೌಂದರ್ಯದ ಭಾವಾನಂದವನ್ನೂ ಉಣಬಡಿಸಿದವರು ಹಿರಿಯ ಕವಿ **ಡಿ.ವಿ.ಜಿ.** ಅಲ್ಲಿನ ಮದನಿಕೆಯರ ಶೃಂಗಾರ, ಲಾವಣ್ಯ, ಮಾಧುರ್ಯ ಕಾವ್ಯದ ಮೂಲಕ ಅಷ್ಟೇ ಸೊಗಸಾಗಿ ಮತ್ತೊಮ್ಮೆ ಅರಳಿ ನಿಂತಿದೆ. ಅದೇ ***ಅನ್ತಃಪುರ ಗೀತೆ.***

**ನಟನವಾಡಿದಳ್ ತರುಣಿ...**

ನಾಂದಿಯ ನಂತರ ಮೊದಲ್ಗೊಳ್ಳುವ ಸೌಂದರ್ಯ ತತ್ವಂ ಮೊದಲ ಗೀತೆ. ಶ್ರೀ ಚೆನ್ನಕೇಶವ, ತತ್ವ ಸೌಂದರ್ಯ, ಧನ್ಯ ಮೂರ್ಧನ್ಯ, ಮುಕುರ ಮುಗ್ಧೆ, ಶುಕಭಾಷಿಣಿ, ವಾಸಂತೀ, ಕೀರವಾಣಿ, ಕಪಿ ಕುಪಿತೆ, ಲೀಲಾ ಕಿರಾತಿ, ಮಂಜುಕಬರೀ, ಮುರಜಾಮೋದೆ, ಕಪಟ ಭೈರವಿ, ತಾಂಡವೇಶ್ವರಿ, ಮುರಳೀಧರೆ, ಗಾನಜೀವನೆ, ಜಗನ್ಮೋಹಿನಿ, ವೀಣಾಪಾಣಿ, ಕುಟಿಲ ಕುಂತಲೆ, ರಸಿಕ ಶಬರಿ, ವೀರಂಗೋಷಿತೆ, ಪುಂ ವಿಡಂಬಿನಿ, ನಾಟ್ಯ ನಿಪುಣೆ, ರಾಗ ಯೋಗಿ, ಸ್ವರ್ಗ ಹಸ್ತೆ, ಕೃತಕ ಶೂಲಿ, ಜಯ ನಿಷಾದಿ, ನಾಟ್ಯ ಸುಂದರಿ, ಭಸ್ಮ ಮೋಹಿನಿ, ನೀಲಾಂಬರೆ, ಹಾವ ಸುಂದರಿ, ಶಕುನ ಶಾರದೆ, ವೀಟಿ ಧರೆ, ನಾಗವೈಣಿಕೆ, ಭೂಷಣಪ್ರಿಯೆ, ಕೇಳೀನಿರತೆ, ಕೊರವಂಜಿ, ಕೀಶರುಷ್ಟೆ, ಪಾದಾಂಗುಳೀಯೆ, ವಿಕಟ ನರ್ತಿನಿ, ಗಾಂಧರ್ವದೇವಿ, ಲಾಸೋತ್ಸವೆ, ಶುಕ ಸಖಿ, ಉಲ್ಲಾಸಿನಿ, ಭಾವದೇವಿ, ವೇಣಿ ಸಂಹಾರೆ, ನೃತ್ಯ ಸರಸ್ವತಿ, ನೃತ್ತೋನ್ಮತ್ತೆ, ವಿರಹಾರ್ತೆ, ಚಾರುಹಾಸಿನಿ, ಪ್ರಣಯವಂಚಿತೆ, ಕಲಾಹಾಂತರಿತೆ, ವಿಲಾಸಿಕೆ, ನೃತ್ತಹಾಸಿನಿ, ಚಕ್ರವಾಕಿ, ಪ್ರಣಯ ಕುಪಿತೆ, ಲತಾಂಗಿ, ಸುಮಬಾಣ, ರತಿ ಮನ್ಮಥ, ಜಯ ವಿಶ್ವಮೋಹನ, ಮನ್ಮಥಂ, ಮಂಗಳಂ, ಸೌಂದರ್ಯ ವಿಜಯಂ... ಮುಂತಾಗಿ ಸುಮಧುರ ಹೆಸರುಗಳ ೬೦ ಮಧುರ ಗೀತೆಗಳಿವೆ.

**ಏನೇ ಶುಕಭಾಷಿಣಿ...**

ಇವುಗಳಿಗೆ ವಿದ್ವಾನ್ ಎಲ್. ರಾಜಾರಾವ್ ಅವರ ಮಾರ್ಗದರ್ಶನದಲ್ಲಿ ಆರಭಿ, ಶಂಕರಾಭರಣ, ಗೌಳಿಪಂತು, ಕೇದಾರ, ಬೇಹಾಗ್, ವಸಂತ, ಕೀರವಾಣಿ, ಕಾಪಿ,





ಕೇದಾರಗೌಳ, ನಾಟಕುರಂಜಿ, ಅಠಾಣ, ಭೈರವಿ, ಮಧ್ಯಮಾವತಿ, ಯದುಕುಲಕಾಂಭೋಜಿ, ರೀತಿಗೌಳ, ಜಗನ್ಮೋಹಿನಿ, ಕಲ್ಯಾಣಿ, ಕಾಂಭೋಜಿ, ಸಾವೇರಿ, ಮಾಯಮಾಳವಗೌಳ, ನಾಟ, ಕಾನಡಾ, ಸಾಂಗತ್ಯ–ಲಾವಣಿ, ಬೇಗಡೆ, ರಾಗಮಾಲಿಕೆ, ನೀಲಾಂಬರಿ, ಕಮಾಚ್, ಆನಂದ ಭೈರವಿ, ಫರಜು, ಬಿಲಹರಿ, ಸಿಂಹೇಂದ್ರ ಮಧ್ಯಮ, ಹುಸೇನಿ, ಹಿಂದೋಳ, ಮಣಿರಂಗು, ಶಹನ, ಹಂಸಧ್ವನಿ, ಸಾರಂಗ, ಪೂರ್ವೀಕಲ್ಯಾಣಿ, ದರ್ಬಾರ್, ಪುನ್ನಗವರಾಳಿ,ಖರಹರಪ್ರಿಯ, ಅಸಾವೇರಿ, ನಾದನಾಮಕ್ರಿಯೆ, ಮುಖಾರಿ, ಶ್ರೀರಂಜಿನಿ, ಚಕ್ರವಾಕ, ಉದಯರವಿ ಚಂದ್ರಿಕೆ, ಲತಾಂಗಿ, ಜಂಜೂಟಿ, ನಾಟಕುರುಂಜಿ ಮುಂತಾದ ರಾಗಗಳನ್ನು ನಿರ್ದೇಶಿಸಲಾಗಿದ್ದರೂ, ಹಾಡುವವರು ತಮ್ಮ ಅಭಿರುಚಿಗೆ ತಕ್ಕಂತೆ ರಾಗ–ತಾಳ ಸಂಯೋಜಿಸಬಹುದು. ಇಲ್ಲಿನ ೬೦ ಗೀತೆಗಳ ಪೈಕಿ ೫೦ ಮಧ್ಯಮ ಕಾಲಗತಿಗೆ ಒಪ್ಪುವಂತಾದರೆ, ಮೊದಲಿನ ಮತ್ತು ಕೊನೆಯ ತಲಾ ೨ ಗೀತೆಗಳು ವಿಳಂಬ ಗತಿಗೆ ಸೂಕ್ತ. ನವಿರಾದ ನೆಮ್ಮದಿಯ ಸಂಗೀತ ಇಲ್ಲಿನದು.

**ನೃತ್ಯ ನೈಪುಣೀ ನಿತ್ಯ ರಾಗಿಣೀ...**

'ಶಬ್ದಕ್ಕೆ ಅರ್ಥ ಬರುವುದು ನಿಘಂಟಿನಿಂದ. ಭಾವಕ್ಕೆ ಸ್ವಾರಸ್ಯ ಬರುವುದು ಅಂತರಂಗದ ಅನುಭವದಿಂದ; ಅನುಭವ ಪರಿಪಾಕದಿಂದ'

ಡಿವಿಜಿಯವರೇ ನುಡಿದಂತೆ ಈ ಗೀತೆಗಳಲ್ಲಿ ಮೂರು ಬಗೆಯ ಭಾವಗಳು ಸಮ್ಮಿಳಿತವಾಗಿವೆ. ಅವು ;

- ರೂಪ ಭಾವ– ವಿಗ್ರಹದಲ್ಲಿ ಶಿಲ್ಪಿ ಕೊರೆದಿರುವ ಅಂಗಾಂಗ ಸಂಜ್ಞೆಗಳಿಂದ ತೋರತಕ್ಕದ್ದು
- ವಾಕ್ಯ ಭಾವ– ಅಂಗಭಂಗಿಗಳ ಇಂಗಿತವನ್ನು ಮಾತುಗಳಿಂದ ಸ್ಪಷ್ಟಪಡಿಸತಕ್ಕುದ್ದು
- ಗಾನ ಭಾವ– ಅಕ್ಷರಗಳ ಒಳಗೂ ಹೊರಗೂ ತುಂಬಿಕೊಂಡು ರಂಜನೆಯನ್ನುಂಟು ಮಾಡುವ ರಾಗ ಪ್ರವಾಹ

ಇವುಗಳನ್ನು ಅರ್ಥೈಸಿಕೊಂಡು, ಹೊಂದಿಸಿಕೊಂಡು ಹಾಡಿದಾಗ , ನರ್ತಿಸಿದಾಗ ಮಾತ್ರ ಭಾವ–ರಸ ಅನುಪಮವೆನಿಸುತ್ತದೆ.

ಇದರಲ್ಲಿನ ಜಟಿಲ ಪದಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಡಾ। ಜಿ. ವರದರಾಜರಾಯರ ಶಬ್ದಾರ್ಥಕೋಶ ಈ ಪುಸ್ತಕದ ಜೊತೆಯಲ್ಲಿದೆ. ಬಹಳ ವರ್ಷಗಳಿಂದಲೂ ಸುಗಮ ಸಂಗೀತ, ನೃತ್ಯ, ನೃತ್ಯ ರೂಪಕ, ನಾಟಕಗಳಲ್ಲಿ ಈ ಗೀತೆಗಳನ್ನು ಹೇರಳವಾಗಿ ಬಳಸಿಕೊಳ್ಳಲಾಗುತ್ತಿದ್ದು, ಕೇಳುಗ –ನೋಡುಗ ಸಹೃದಯರಿಗೆ ರಸಾಸ್ವಾದವನ್ನು ಮಾಡುವಲ್ಲಿ ಸೃಷ್ಟಿಶೀಲವೆನಿಸಿದೆ. ಕಾವ್ಯಾಲಯ, ಮೈಸೂರು ಇವರ ಪ್ರಕಾಶನದಲ್ಲಿ ಈ ಕೃತಿಯನ್ನು ಹೊರತರಲಾಗಿದೆ.

# ತಿಲ್ಲಾನ

**ವೈಷ್ಣವಿ .ಎನ್**

**ಸಾ**ಮಾನ್ಯವಾಗಿ ಭರತನೃತ್ಯ ಕಾರ್ಯಕ್ರಮದಲ್ಲಿ ಸಹೃದಯರಿಗೆ ಹೆಚ್ಚು ಪರಿಚಿತವಿರುವ, ಪ್ರೇಕ್ಷಕರು ಹೆಚ್ಚು ಕಾಯುವ, ಆನಂದಿಸುವ, ಮೆಚ್ಚುಗೆ ನೀಡುವ ನೃತ್ತಬಂಧವೆಂದರೆ ಯಾವುದು?- ಉತ್ತರ ತಿಲ್ಲಾನ. ಹೌದು ತಾನೇ ! ತಿಲ್ಲಾನದ ವೈಶಿಷ್ಟ್ಯವೇ ಅಂತಹುದು. ಅವು ಹರ್ಷವನ್ನು ಉಂಟುಮಾಡುವ ಆನಂದದಾಯಕ, ಆಹ್ಲಾದಕರ, ಉತ್ಸಾಹಭರಿತ, ಚುರುಕಾದ ಚಲನೆಗಳು. ನೃತ್ಯ ಮತ್ತು ಕರ್ನಾಟಕ ಸಂಗೀತ ಕಛೇರಿಗಳೆರಡರಲ್ಲೂ ಕಂಡುಬರುವ ಈ ತಿಲ್ಲಾನಗಳನ್ನು ಆನಂದಿಸಲು ವೀಕ್ಷಕರು ಎಂದೆಂದಿಗೂ ಉತ್ಸುಕರಾಗಿರುತ್ತಾರೆ.

ತಿಲ್ಲಾನವೆಂದರೆ ನಾದ ಲಯಗಳಿಂದ ಕೂಡಿದ ಸಂಗೀತಕ್ಕೆ ಸುಂದರವಾದ ಶಿಲ್ಪಭಂಗಿಗಳನ್ನು ಮತ್ತು ಶೊಲ್ಕಟ್ಟುಗಳನ್ನು ಅಳವಡಿಸಿ; ಶೀಘ್ರಗತಿಯಲ್ಲಿ ರೂಪಿಸಿರುವ ರಚನೆ. 'ಮನಸ್ಸಿನ ಅಲೆದಾಟ ಬಡಿದಾಟಗಳೆಲ್ಲವೂ ಕಳೆದು ಭಯ ಚಿಂತಾದಿಗಳಿಲ್ಲದ ಮನಸ್ಸಿನ ಸ್ಥಿತಿಯನ್ನು, ಹಾಗೂ ಅದರಿಂದ ದೊರೆತ ಸುಖವನ್ನು ಮತ್ತು ಏಕಾಕರವಾಗಿ ಹರಡಿರುವ ಆನಂದವನ್ನು ತನ್ನ ವಿನ್ಯಾಸಗಳಿಂದ ಪ್ರದರ್ಶಿಸುವ ಕಲಾವಿದೆಯು ತನ್ನ ವಿದ್ಯಾ ಸಂಪೂರ್ಣತೆಯ ಪರಿಪೂರ್ಣತೆಯನ್ನು ಸೂಚಿಸುವ ಸಲುವಾಗಿ ಆಯ್ದುಕೊಂಡ, ಅಂತಿಮವಾಗಿ ಶಾಂತಿ ರಸಕ್ಕೆ ತುಡಿಯುವ ನೃತ್ತಬಂಧ' ಎನ್ನುವುದು ನೃತ್ಯ ವಿದ್ವಾಂಸ ವಿ. ಎಸ್. ಕೌಶಿಕ್ ಅವರ ನುಡಿ.

ತಿಲ್ಲಾನವು ಭರತನಾಟ್ಯ ಪ್ರದರ್ಶನಕ್ಕೆ ಯೋಗ್ಯ ಅಂತ್ಯವನ್ನು ಒದಗಿಸುವಂತದ್ದು. ಅಲಾರಿಪು ನಾಂದಿಯಾದರೆ ತಿಲ್ಲಾನ ಮಂಗಲಪ್ರದವಾದ ಮುಕ್ತಾಯ ನೀಡುವ ನೃತ್ತಬಂಧ. ಭಾವಾಭಿನಯದ ನಿಧಾನಗತಿಯ ಪದ-ಜಾವಳಿ-ದೇವರನಾಮ-ಅಷ್ಟಪದಿ ಅಭಿನಯಗಳ ಆನಂತರ ಭಾವುಕರ ಮನಸ್ಸು ಮತ್ತಷ್ಟು ಭಾವಪೂರ್ಣವಾಗಿ ಇಡುವ ಸಾಹಿತ್ಯದಿಂದೊಡಗೂಡಿದ ಚೈತನ್ಯದಾಯಕ ನೃತ್ತ. ಪಾಠಿ ಲಕ್ಷಣದ ವಿದ್ವತ್ಪೂರ್ಣ ರಚನೆಗಳಾದ ಇವು, ಹಿಂದೂಸ್ಥಾನಿ ಸಂಗೀತದಲ್ಲಿ ಹಾಡುವ ತರಾನಾ ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ ಎಂಬ ಅಭಿಪ್ರಾಯ





ಕೆಲವರದ್ದಾದರೆ, ಸಾವಿರಾರು ವರ್ಷಗಳ ಹಿಂದೆ ಕೈವಾರ (ಅವನದ್ಧ ವಾದ್ಯ(ಚರ್ಮವಾದ್ಯ)ಗಳಿಂದ ಉದ್ಭವವಾಗುವ ಪಾಠಾಕ್ಷರಗಳು) ವೆಂಬ ಹೆಸರಿನಲ್ಲಿ ಸಂಗೀತ ಪ್ರಬಂಧದಿಂದ ಉಂಟಾದ ರಚನೆಯೆನ್ನುವುದು ಇನ್ನೂ ಕೆಲವರ ಅಭಿಮತ. ತಿರಿತಿಲ್ಲಾನ ಎಂಬ ದೇಸೀ ಪ್ರಬಂಧದಿಂದ ಇದು ಹುಟ್ಟಿದೆ ಎನ್ನುವುದು ಮತ್ತೊಂದು ನಂಬಿಕೆ. ತಿಲ್ಲಾನದ 'ತಾನತಂದಾನ' ರೂಪ ಜನಪದ ಹಾಡುಗಳಲ್ಲಿಯೂ ಕಂಡುಬರುತ್ತದೆ ಎನ್ನುವುದು ಇನ್ನೊಂದು ವೈಶಿಷ್ಟ್ಯ.

ಪ್ರಪ್ರಥಮವಾಗಿ ತಿಲ್ಲಾನವು ತಂಜಾವೂರಿನ ವೀರಭದ್ರಯ್ಯ ಅವರಿಂದ ರಚಿಸಲ್ಪಟ್ಟಿತು. ನಂತರ ತಂಜಾವೂರು ಸಹೋದರಿಂದ ಇವುಗಳು ಸಾಂಪ್ರದಾಯಿಕ ನೃತ್ಯ ಪ್ರದರ್ಶನಕ್ಕೆ ಅಳವಡಿಸಲ್ಪಟ್ಟವು. ಕಾಲಕ್ರಮದಲ್ಲಿ ಸ್ವಾತಿ ತಿರುನಾಳ್, ಮಹಾ ವೈದ್ಯನಾಥ ಅಯ್ಯರ್, ರಾಮನಾಡು ಶ್ರೀನಿವಾಸ ಅಯ್ಯಂಗಾರ್, ಲಾಲ್‌ಗುಡಿ ಜಯರಾಮನ್, ಡಾ। ಬಾಲಮುರಳೀ ಕೃಷ್ಣ, ಕೃಷ್ಣಸ್ವಾಮಿ ಅಯ್ಯ, ಕನ್ನುಸ್ವಾಮಿ, ಊತ್ತುಕಾಡು ವೆಂಕಟಸುಬ್ಬಯ್ಯರ್, ಪಟ್ನಂ ಸುಬ್ರಹ್ಮಣ್ಯ ಅಯ್ಯರ್, ಮಧುರೈ ಕೃಷ್ಣನ್, ಕುನ್ರಕುಡಿ ಕೃಷ್ಣ ಅಯ್ಯರ್, ಮಹಾರಾಜಪುರಂ ಸಂತಾನಂ ಅವರ ತಿಲ್ಲಾನಗಳೂ ಜನಪ್ರಿಯವೆನಿಸಿದವು. ಮೈಸೂರು ರಾಜರುಗಳ ಕಾಲದಲ್ಲಿ ಕನ್ನಡದಲ್ಲೂ ತುಂಬಾ ತಿಲ್ಲಾನಗಳು ರಚನೆಯಾಯಿತು. ಮೈಸೂರು ಸದಾಶಿವರಾವ್, ಮೈಸೂರು ವಾಸುದೇವಾಚಾರ್ಯ, ಮೈಸೂರು ವೆಂಕಟಗಿರಿಯಪ್ಪ, ಮುತ್ತಯ್ಯ ಭಾಗವತರ್, ವೀಣೆ ಶೇಷಣ್ಣ, ಪಿಟೀಲು ಚೌಡಯ್ಯನವರು, ಡಾ। ದೊರೆಸ್ವಾಮಿ ಅಯ್ಯಂಗಾರ್ ಅವರಂತಹ ಶ್ರೇಷ್ಠ ರಚನೆಕಾರರು ತಿಲ್ಲಾನಗಳು ಗುರುತಿಸಲ್ಪಟ್ಟವು. ಅಷ್ಟೇ ಅಲ್ಲದೆ, ಇಂದಿನ ಪ್ರತಿಭಾನ್ವಿತ ರಚನೆಕಾರರಾದ ಲಲಿತ ನವಿಲೆ, ದ್ವಾರಕಿ ಕೃಷ್ಣಸ್ವಾಮಿ, ಆರ್. ಕೆ. ಸೂರ್ಯನಾರಾಯಣ್ ಅವರು ಬರೆದ ತಿಲ್ಲಾನಗಳು ಬಳಕೆಯಲ್ಲಿವೆ.

ರೂಪಕ ಮತ್ತು ಆದಿತಾಳಗಳಲ್ಲಿ ಹೆಚ್ಚಿನ ತಿಲ್ಲಾನಗಳು ರಚನೆಯಾಗಿದ್ದರೂ, ಕೆಲವೊಮ್ಮೆ ವಿಶೇಷ ತಾಳಗಳಲ್ಲಿಯೂ ತಿಲ್ಲಾನಗಳಿರುವುದನ್ನು ಕಾಣಬಹುದು. ಧೀಂ ತನದಿರನಾ, ನಾದರ್ ಧೀಂ, ಉದನಧೀ ದಿರದಿರದಾನಿ, ಧೀತಿಲ್ಲಾನ ಮುಂತಾದ ಶಬ್ದಗಳನ್ನು ನಟುವನ್ನಾರ್(ನೃತ್ಯದ ನಟುವಾಂಗ ಮಾಡುವವರು) ಹಾಡುತ್ತಾರೆ.

ತಿಲ್ಲಾನಕ್ಕೆ ಪಲ್ಲವಿ, ಅನುಪಲ್ಲವಿ, ಚರಣಗಳೆಂಬ ಪ್ರಧಾನ ೩ ಅಂಗಗಳಿವೆ. ಪಲ್ಲವಿಯಲ್ಲಿ ಪಾಠಾಕ್ಷರ, ಅನುಪಲ್ಲವಿಯಲ್ಲಿ ಸ್ವರಸಹಿತ ಜತಿ, ಚರಣಗಳಲ್ಲಿ ಅಭಿನಯಕ್ಕೆ ತಕ್ಕುದಾದ ಸಾಹಿತ್ಯ ಮತ್ತು ಸೊಲ್ಕಟ್ಟು ಇದರ ಲಕ್ಷಣ. ಸೊಲ್ಕಟ್ಟುಗಳಿಂದಲೇ ಪ್ರಾರಂಭವಾಗಿ ಸೊಲ್ಕಟ್ಟುಗಳಿಂದಲೇ ಕೊನೆಗೊಳ್ಳುವ ಇವುಗಳದ್ದು ಲಾಲಿತ್ಯಪೂರ್ಣ ವಿನ್ಯಾಸ. ಅನುಪಲ್ಲವಿ ಮತ್ತು ಚರಣದ ಮಧ್ಯೆ

ರಾಜರನ್ನೋ ಅಥವಾ ದೇವರನ್ನೋ ಹೊಗಳುವ ಚಿಕ್ಕದಾದ ಸಾಹಿತ್ಯವಿರುತ್ತದೆ. ಕೆಲವೊಮ್ಮೆ ರಚನಕಾರರ ಅಂಕಿತನಾಮ ಇಲ್ಲವೇ ರಾಗ ಅಂಕಿತ ಅಂದರೆ ರಾಗದ ಹೆಸರುಗಳಿರುತ್ತವೆ. ದ್ವಿಖಂಡ ತಿಲ್ಲಾನಗಳೆಂಬ ಪ್ರಕಾರಗಳಲ್ಲಿ ಕೊನೆಯಲ್ಲಿ ಸಾಹಿತ್ಯವಿರುವುದಿಲ್ಲ.

ದೃಷ್ಟಿ ಚಲನೆಯಿಂದ, ಮೈಯ್ಯಡವಿನಿಂದ ಪ್ರಾರಂಭವಾಗುವ ತಿಲ್ಲಾನವು ಪಂಚ ನಡೆಗಳಿಂದ ಕೂಡಿ ಚಾರಿ, ಕರಣ, ಅಂಗಾಹಾರಗಳಿಂದ ವಿನ್ಯಾಸಗೊಳ್ಳುತ್ತವೆ. ಪಲ್ಲವಿಯನ್ನು ಅನೇಕ ಸಲ ಹಾಡಿ ನೃತ್ತದ ವಿನ್ಯಾಸವನ್ನು ಹಲವು ರೀತಿಯಲ್ಲಿ ನರ್ತಿಸಿ, ಕೆಲವೊಮ್ಮೆ ಮೃದಂಗದ ಪಾಠಾಕ್ಷರಗಳಿಗೆ ಕಾಲ್ಚಲನೆಯಲ್ಲಿ ಪ್ರತಿಭೆ ತೋರುವ ಲವಲವಿಕೆ ಇಲ್ಲಿನದ್ದು. ಕಣ್ಣು, ಹುಬ್ಬು, ಕತ್ತು, ಮೈ ಚಲನೆಗಳು, ವಿವಿಧ ಮಂಡಲ, ಆಕರ್ಷಕ ಶಿಲಾಭಂಗಿಗಳು, ಉತ್ಪ್ಲವನ-ಭ್ರಮರಿ- ರಂಗಾಕ್ರಮಣ ಮುಂತಾಗಿ ಕ್ಲಿಷ್ಟ ಗತಿಯ-ವೈವಿಧ್ಯಮಯ ಅಡವುಗಳನ್ನೊಳಗೊಂಡ ಜತಿಗಳು, ಕೋರ್ವೆಗಳು, ಅರುಧಿಗಳು, ಚಮತ್ಕಾರಪೂರ್ಣವಾದ ತೀರ್ಮಾನಗಳು..ಹೀಗೆ ಪ್ರತೀ ಕೋನದಲ್ಲೂ ತನ್ನದೇ ಆದ ಜೀವಂತಿಕೆಯ ಸೃಷ್ಟಿ.

ಕೆಲವು ಬಾರಿ ಆರಂಭದಲ್ಲಿ ಸ್ವಲ್ಪ ವಿಳಂಬ ಕಾಲದಲ್ಲಿ ಪ್ರಾರಂಭಿಸಿ ಕ್ರಮೇಣ ಲಯ ಹೆಚ್ಚಿಸುತ್ತಾ ಅತಿ ವೇಗದಿಂದ ಮುಕ್ತಾಯ ಮಾಡುವ ಕ್ರಮವಿದೆ. ಇದು ತಪ್ಪು ಎಂಬ ಅಭಿಪ್ರಾಯ ಕೆಲವರದ್ದಾದರೆ, ತಿಲ್ಲಾನದಂತಹ ವಿಶಿಷ್ಟ ನೃತ್ತದಲ್ಲಿ ತಾಳ, ಕಾಲ್ಚಲನೆಗಳು ವಿಶಿಷ್ಟವಾಗಿರುವುದರಿಂದ ಲಯವನ್ನು ಹೆಚ್ಚಿಸುವುದು ತಪ್ಪಿಲ್ಲ; ಇದರಿಂದ ಕಲಾವಿದರ ಪ್ರೌಢಿಮೆ, ಸಂಯೋಜನಾ ಶಕ್ತಿ ತಿಳಿದುಕೊಳ್ಳಬಹುದು ಎನ್ನುವುದೂ ಇನ್ನೂ ಹಲವರ ವಾದ. ಉತ್ತಮ ವಿದ್ಯಾರ್ಥಿಯು ಶ್ರೇಷ್ಠ ಗುರುಗಳಿಂದ ಕಲಿತು ಖಚಿತವಾಗಿ ನರ್ತಿಸಿದಲ್ಲಿ ತಿಲ್ಲಾನ ಮನೋರಂಜಕವಾಗುವುದರಲ್ಲಿ ಸಂಶಯವಿಲ್ಲ.

✲✲ ✲✲







# ಹಸ್ತ ಮಯೂರಿ



## ಕಪಿತ್ಥ ಹಸ್ತ

**ಲಕ್ಷಣ:** ಶಿಖರಹಸ್ತದಲ್ಲಿ ಹೆಬ್ಬೆರಳ ತುದಿಯ ಮೇಲೆ ತೋರುಬೆರಳನ್ನು ಬಾಗಿಸಿ ಹಿಡಿದರೆ ಕಪಿತ್ಥ ಹಸ್ತ. ಕಪಿತ್ಥ ಅಂದರೆ ಬೇಲದ ಕಾಯಿ ಎಂದರ್ಥ. ಕೆಲವೊಮ್ಮೆ ಹಸ್ತದ ಅಂದಕ್ಕೋಸ್ಕರ ಕಿರುಬೆರಳನ್ನು ಮಡಿಸಿ ತೋರಿಸುವ ಪದ್ಧತಿ ಇದೆ. ಸಮುದ್ರಮಥನದಲ್ಲಿ ವಿಷ್ಣು ಮಂದರ ಪರ್ವತವನ್ನು ಸೆಳೆದದ್ದು ಈ ಬಗೆಯ ಹಸ್ತ ಶೈಲಿಯಿಂದ ಎನ್ನಲಾಗಿದೆ. ಇದರ ಬಣ್ಣ ಬಿಳಿ. ಋಷಿ ಜಾತಿ, ನಾರದ ಋಷಿಸ್ಥಾನ, ಪದ್ಮಗರ್ಭ ವಿಷ್ಣು ಆರಾಧನಾ ದೇವತೆ. ಒಡಿಸ್ಸಿ ನೃತ್ಯ ಪದ್ಧತಿಯಲ್ಲಿ ಇದಕ್ಕೆ ಅಂಕುಶ ಹಸ್ತವೆಂದು ಹೆಸರು. ನಿತ್ಯಜೀವನದಲ್ಲಿ ಈ ಹಸ್ತವನ್ನು ಬರೆಯುವುದನ್ನು ಸೂಚಿಸಲು ಬಳಸುತ್ತಾರೆ.

**ವಿನಿಯೋಗ:** ಲಕ್ಷ್ಮಿ, ಸರಸ್ವತಿ, ವಸ್ತ್ರವನ್ನು ಸೂಚಿಸುವುದು, ತಾಳವನ್ನು ಹಾಕುವುದು, ಹಾಲು ಹಿಂಡುವುದು, ಕಾಡಿಗೆ ಇಟ್ಟುಕೊಳ್ಳುವುದು, ಸರಸದಿಂದ ಪುಷ್ಪ ಹಿಡಿದುಕೊಳ್ಳುವುದು, ಸೆರಗು ಎಳೆಯುವುದು, ಮುಸುಕು ಹಾಕಿಕೊಳ್ಳುವುದು, ಧೂಪ-ದೀಪಾರ್ಚನೆ ಮಾಡುವುದು.

**ಇತರೆ ವಿನಿಯೋಗ:** ಬಿಡಿಹೂ ಮುಡಿದುಕೊಳ್ಳುವುದು, ಚಕ್ರ, ಬಿಲ್ಲು, ಸಿಡಿಲು, ಗಧಾದಿ ಆಯುಧಗಳು, ಕವಡೆ ಬಿಡುವುದು, ಜಪಮಾಲೆ, ಬೋಧನೆ, ಕಡೆಗೋಲನ್ನು ಹಿಡಿದು ಕಡೆಯುವುದು, ಹಲ್ಲುಜ್ಜುವುದು, ಹಣ್ಣನ್ನು ಸ್ವಾದಿಸುವುದು, ತಾಂಬೂಲ ಸ್ವೀಕಾರ, ನೀರು ಸೇದುವುದು, ಬತ್ತಳಿಕೆಯಿಂದ ಬಾಣ ಎಳೆಯುವುದು, ಧೈರ್ಯ, ಸಮಯ, ಆಕರ್ಷಣೆ, ವರುಣ, ಬಾಣ, ಸತ್ಯ-ಉಚಿತವಾದ ಕಾರ್ಯಗಳು, ಆರತಿ, ಬರೆಯುವ ಕಡ್ಡಿಯನ್ನು ಮೊನೆಗೊಳಿಸು, ಬಿಲ್ಲಿನ ಹಗ್ಗ, ಬಾಣ, ತಕ್ಕಡಿ ಹಿಡಿವುದು, ಪಿತೃಗಳಿಗೆ ಪಿಂಡ, ರಾಟೆಯಿಂದ ನೂಲುಸುತ್ತು, ಬುಗುರಿಗೆ ನೂಲುಸುತ್ತು, ಕವಣೆ ಬೀಸುವುದು, ಮಣಿಸುರಿಯುವುದು, ಹುಲ್ಲು ಕಡ್ಡಿ ಹಿಡಿಯುವುದು, ಕುತ್ತುವುದು, ಕಡಿಯುವುದು, ಕಚ್ಚುವುದು, ನದೀಸ್ನಾನ, ವೀಳ್ಯ, ಯಶಸ್ಸು.

ಕಪಿತ್ಥ ಹಸ್ತದ ತರ್ಜನೀ ಬೆರಳಿನಿಂದ ಹೆಬ್ಬೆರಳನ್ನು ಎರಡು ಅಂಗುಲದಷ್ಟು ದೂರ ಸರಿಸುವುದು **ಕುಟಿಲಹಸ್ತ**ವೆನಿಸಿಕೊಳ್ಳುತ್ತದೆ. ಕುಟಿಲ ಅಂದರೆ ಡೊಂಕು ಎಂದರ್ಥ. ಇದು ರಣಗೃಧ್ರವೆಂಬ ಹಸ್ತಕ್ಕೆ ಸಾಮ್ಯತೆ

ಹೊಂದಿದೆ. ಅಂಕುಶ, ಅನ್ಯೋನ್ಯಕಲಹ, ಮನಸ್ಸಿನಲ್ಲಿ ಕುಟಿಲತೆ, ಚಿಕ್ಕ ಕುಡುಗೋಲು, ವೀಳೆಯದೆಲೆಯನ್ನು ಬಿಡಿಸುವುದು. ಮೀನು ಹಿಡಿಯುವ ಗಾಳ, ಗೌಳಿ ನುಡಿದಾಗ ತದ್ದೋಷ ಪರಿಹಾರಾರ್ಥವಾಗಿ ನೆಲವನ್ನು ಕುಟ್ಟುವುದು, ಹದ್ದು ಮತ್ತು ಕೊಕ್ಕರೆಯ ಕೊಕ್ಕುಗಳು ಎಂಬದನ್ನು ಹೇಳಲು ಇದನ್ನು ಬಳಸುತ್ತಾರೆ.

ಕಪಿತ್ಥದಲ್ಲಿ ಹೆಬ್ಬೆರಳು ತೋರು ಬೆರಳನ್ನು ಬೇರೆ ಬೇರೆ ಮಾಡುವುದನ್ನು **ಕಾಕತುಂಡ** ಹಸ್ತವೆನ್ನುತ್ತಾರೆ. ಕುಟಿಲ ಹಸ್ತದಂತೆ ಈ ಹಸ್ತ ತೋರುತ್ತದೆ. ನರ್ತನ ನಿರ್ಣಯದಲ್ಲಿ ಉಲ್ಲೇಖಿತವಾದ ಹಸ್ತವಿದು.

ದೇವತಾ ಹಸ್ತಗಳಲ್ಲಿ ವಿಘ್ನ ನಿವಾರಕ ವಿನಾಯಕನನ್ನು ಸೂಚಿಸಲು ಎದೆಯ ಕೆಳಗೆ ಕಪಿತ್ಥ ಹಸ್ತಗಳನ್ನು ಹಿಡಿಯುವುದು ಲಕ್ಷಣ. ಎರಡೂ ಕೈಗಳಲ್ಲಿ ಕಪಿತ್ಥ ಹಸ್ತ ಹಿಡಿದು ಎದಿರು ಅಲುಗಾಡಿಸುವುದು ಶಿಬಿ ಚಕ್ರವರ್ತಿಯ ಸಂಕೇತ. ಎರಡು ಭುಜಗಳ ಬಳಿ ಅಲಪದ್ಮ ಮತ್ತು ಕಪಿತ್ಥಹಸ್ತಗಳನ್ನು ಹಿಡಿಯುವುದು ಸೂರ್ಯಹಸ್ತ.

## ಲಲಿತ ಲಹರಿ

### ಪರಮೆ ತುಂಬಿ



ಕಾಳಿ ಗಾಳಿಯಲಿ ಗಾಡಿಯೇರುತಿರೆ
ಗಾಲಿ ತಿರುಗುತಿಹವು
ಕಾಲಕಾಲಕೂ ಕಾಲ ತಾಲದಲಿ
ಗೆಜ್ಜೆ ಮಿರುಗುತಿಹವು

ಇದು ಯಾವ ಗೀತಿ, ನವರೀತಿಯಲ್ಲಿ
ಭಯ ಭೀತಿ ತೋರೆದು ಬಂತು ?
ನಾಂದಿಯಾಗಿ ನವನಾಟ್ಯ ನಡೆಸಿರಲು
ವಿಶ್ವ ನಟನೆ ನಿಂತು.

–ದ.ರಾ.ಬೇಂದ್ರೆ (ಅರುಳು–ಮರುಳು)









# ಪರಿಭ್ರಮಣ

**ನೃತ್ಯಕಲೆಗೆ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವವರ ಕಿರು ಪರಿಚಯದೊಂದಿಗೆ ನಮ್ಮ ನೃತ್ಯ ಕಲೆಯ ಅಸಾಧ್ಯ ಸಾಧ್ಯತೆಗಳ ಬಗ್ಗೆ ಮತ್ತಷ್ಟು ಬೆಳಕು ಬೀರುವ ಅಂಕಣವೇ ಪರಿಭ್ರಮಣ. ಈ ಮೂಲಕ ನೃತ್ಯಕಲೆಗೆ ಸಂಬಂಧಿಸಿದಂತೆ ನಮ್ಮನ್ನು ನಾವು ನೋಡಿಕೊಳ್ಳುವ, ಅರಿತುಕೊಳ್ಳುವ, ಪರಿಚಯಿಸಿಕೊಳ್ಳುವ, ಕಣ್ತೆರೆಯುವ ಅವಕಾಶ. ನಿಮ್ಮ ಊರಿನಲ್ಲಿರುವ ಕಲೆ–ನೃತ್ಯಕ್ಕೆ ಸೇವೆ ಸಲ್ಲಿಸುತ್ತಿರುವವರ ಕುರಿತಾಗಿ ನೀವೂ ನಮಗೆ ಬರೆದು ಕಳಿಸಬಹುದು; ಮಾಹಿತಿ ನೀಡಬಹುದು. ಅಥವಾ ಗುರು–ಕಲಾವಿದರೂ ಈ ಕಾರ್ಯಕ್ಕೆ ಕೈಜೋಡಿಸುವುದಾದಲ್ಲಿ ಅವರವರ ನೃತ್ಯ ಸಂಸ್ಥೆಗಳ ಕಿರು ಪರಿಚಯವನ್ನೀಯಬಹುದು. ಪ್ರತೀ ಸಂಚಿಕೆಯಲ್ಲೂ ಹೀಗೆ ಶಾಖಾವಾರು ಪರಿಚಯವನ್ನೀಯಲು ಸಾಧ್ಯವಾದಷ್ಟು ಪ್ರಯತ್ನಿಸುತ್ತೇವೆ. ಇದಕ್ಕೆ ನಿಮ್ಮೆಲ್ಲರ ಸಹಕಾರವಿದ್ದಲ್ಲಿ ಮತ್ತಷ್ಟು ಸಮಗ್ರವಾಗಿ ವಿಷಯ ವಿಮರ್ಶೆ ಸಾಧ್ಯ. ಸಹಕರಿಸುತ್ತೀರಲ್ವಾ!**

**ಹಾಗಾದರೆ ಮೊದಲನೆಯದಾಗಿ ಭ್ರಮರಿಯ ಹುಟ್ಟೂರಾದ ಕೊಡಗಿನಿಂದ ಈ ಸಲದ ಪರಿಭ್ರಮಣ ಆರಂಭಿಸೋಣವೇ? ಬನ್ನಿ ಕರ್ನಾಟಕದ ಕಾಶ್ಮೀರಕ್ಕೆ...**

***ಭಾರತೀಯ ನೃತ್ಯಕಲಾ ಪರಿಷತ್* :** ದಿವಂಗತ ಅಂಬಳೆ ಸುಬ್ಬರಾವ್ ಅವರಿಂದ ಸ್ಥಾಪಿತವಾದ ನೃತ್ಯ–ಲಲಿತಕಲೆಗಳ ತರಬೇತಿ ಸಂಸ್ಥೆ. ಕೊಡಗಿನಲ್ಲಿ ನೃತ್ಯದ ಕುರಿತಾಗಿ ಆಸಕ್ತಿ ಮತ್ತು ಶಿಕ್ಷಣ ನೀಡಲು ಪ್ರಾರಂಭಿಸಿದ ಮೊದಲ ಸಮಗ್ರ ಶಾಲೆ ಎಂದರೆ ತಪ್ಪೇನಿಲ್ಲ. ಕೊಡಗಿನಲ್ಲಿ ನೃತ್ಯ ರಂಗಕ್ಕೆ ಅವಿಸ್ಮರಣೀಯ ಸೇವೆ ಸಲ್ಲಿಸಿದ ಸುಬ್ಬರಾವ್ ಮತ್ತು ಅವರ ಕುಟುಂಬ; ನೃತ್ಯ ಮಾತ್ರವಲ್ಲದೆ ಸಂಗೀತ, ಕೂಚುಪುಡಿ, ಮೃದಂಗ, ಪಿಟೀಲು ಮುಂತಾದ ಕ್ಷೇತ್ರದಲ್ಲಿ ಹಲವು ಕಲಾವಿದರನ್ನು ಕೊಡುಗೆಯಾಗಿ ಕೊಟ್ಟಿದೆ. ಕೂಚಿಪುಡಿ ಶೈಲಿಯ, ಭರತನಾಟ್ಯ ಮತ್ತು ಯೋಗದ ಪಟ್ಟುಗಳ ದೂಪಾರತಿ ನೃತ್ಯ ರಂಗಕ್ಕೆ ಇವರ ಕಾಣಿಕೆ ಎಂದರೆ ತಪ್ಪೇನಿಲ್ಲ. ದ್ವಾರಂ ವೆಂಕಟಸ್ವಾಮಿ ನಾಯ್ಡು, ವರದಾರಾಜ ಅಯ್ಯಂಗಾರ್, ನಂಜನಗೂಡು ನಾಗರತ್ನಮ್ಮ ಇವರ ಬಳಿಯಲ್ಲಿ ಅಭ್ಯಸಿಸಿದ ಗುರು ವಿದ್ವಾನ್ ಅಂಬಳೆ ಸುಬ್ಬರಾಯರು ಸಾಂಸ್ಕೃತಿಕವಾಗಿ ಕೊಡಗನ್ನು ಬೆಳೆಸಿದವರು. ನೃತ್ಯ ವಿದ್ವಾಂಸ

ವಿ. ಎಸ್. ಕೌಶಿಕ್ ಅವರ ಗೆಳೆಯರೂ, ಸಮಕಾಲೀನರೂ ಆದ ಸುಬ್ಬರಾಯರು, ಕೊಡಗಿನಲ್ಲಿ ಸಾಂಸ್ಕೃತಿಕ ರಂಗದ ಅವಶ್ಯಕತೆ ಮನಗಂಡರು. ೧೯೭೨ ರ ಶಿವರಾತ್ರಿಯಂದು ನೃತ್ಯಕಲಾ ಪರಿಷತ್ತನ್ನೂ ಒಳಗೊಂಡಂತೆ ಕುಟುಂಬವನ್ನೇ ಕಲಾಸೇವೆಗಾಗಿ ಮುಡಿಪಿಟ್ಟರು.

ಇವರ ಪುತ್ರಿ ಕುಮಾರಿ ಅಂಬಳೆ ರಾಜೇಶ್ವರಿ ಅವರು ಶಂಕರನಾರಾಯಣ್, ಕೇರಳ ಕಲಾಮಂಡಲಂನ ಚಿನ್ನಮ್ಮ, ಮೋಹನ್ ಭಾರ್ಗವ್, ವಿ. ಎಸ್. ಕೌಶಿಕ್, ಮಚಲೀಪಟ್ಟಣಂನ ಭಾಗವತೀ ಕೃಷ್ಣಕುಮಾರ್ ಮುಂತಾದವರ ಗರಡಿಯಲ್ಲಿ ಸಂಗೀತ, ಭರತನಾಟ್ಯ, ಕೂಚುಪುಡಿಯನ್ನು ಕರಗತ ಮಾಡಿಕೊಂಡು ನೃತ್ಯ ಜಗತ್ತಿನ ಸೇವೆಯನ್ನು ಮುಂದುವರೆಸಿದರೆ, ಸುಬ್ಬರಾಯರ ಪುತ್ರ ಸತ್ಯಪ್ರಸಾದ್ ಮೃದಂಗ ವಿದ್ವಾನ್ ಆಗಿ ಪ್ರಸಿದ್ಧರು. ಸತ್ಯಪ್ರಸಾದರ ಪುತ್ರರಾದ ಹೇರಂಬ –ಹೇಮಂತರೂ ಕೊಳಲು ಕ್ಷೇತ್ರದಲ್ಲಿ ಈಗಾಗಲೇ ಬಾಲ ಪ್ರತಿಭೆಗಳಾಗಿ ಮಿಂಚುತ್ತಿದ್ದು, ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ.

ಈ ಮೂರುವರೆ ದಶಕಗಳಲ್ಲಿ ಸುಮಾರು ೧೮,೦೦೦ ವಿದ್ಯಾರ್ಥಿಗಳು ಸಂಸ್ಥೆಯಿಂದ ಶಿಕ್ಷಣ ಪಡೆದಿದ್ದು ದೇಶ–ವಿದೇಶಾದ್ಯಂತ ಯಶಸ್ಸು ದಾಖಲಿಸಿದ್ದಾರೆ. ಭಾರತವನ್ನೂ ಒಳಗೊಂಡಂತೆ ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ದಕ್ಷಿಣ ಆಫ್ರಿಕಾ, ಯು.ಎಸ್.ಎ ಇತ್ಯಾದಿ ದೇಶಗಳಲ್ಲಿ ಪರಿಷತ್ ಒಟ್ಟು ೬೦೦ ಶಾಖೆಗಳನ್ನು ಹೊಂದಿದೆ. ಪ್ರಸಕ್ತ ಅಂಬಳೆ ರಾಜೇಶ್ವರಿಯವರು ಹಾಸನದ ಶಾಖೆಯಲ್ಲಿ ಶಿಕ್ಷಣ ನೀಡುತ್ತಿದ್ದರೆ, ಪರಿಷತ್ತಿನ ಶಾಖೆ ಮಡಿಕೇರಿ ಮತ್ತು ಕೊಡಗಿನ ಒಳನಾಡುಗಳಲ್ಲಿ ಮುಂದುವರೆದಿದೆ. ಇವರ ಶಿಷ್ಯೆ ಜಯಶ್ರೀ ಸುಮಾರು ೮ ವರ್ಷಗಳ ಕಾಲ ಮಡಿಕೇರಿಯಲ್ಲಿ ತಮ್ಮದೇ ಆದ ನೃತ್ಯ ತರಗತಿಯನ್ನು ವೇದಾಂತಸಂಘದಲ್ಲಿ ಮಾಡುತ್ತಾ ಬಂದಿರುತ್ತಾರೆ.

***<u>ನಾಟ್ಯನಿಕೇತನ</u> :*** ಪಂದನಲ್ಲೂರು ಶೈಲಿಯ ಉಳ್ಳಾಲ ಮೋಹನ್ ಕುಮಾರ್, ರಾಜೇಶ್ವರಿ, ಮುರಳೀಧರರಾವ್ ಅವರ ಶಿಷ್ಯೆ ಶ್ರೀಮತಿ ವಿದುಷಿ ವೀಣಾ ಕಾರಂತ್ ಅವರು ಈ ಸಂಸ್ಥೆಯ ಸ್ಥಾಪಕ ನೃತ್ಯಗುರುಗಳು. ೧೩ ವರ್ಷಗಳ ಕಾಲ ಮಡಿಕೇರಿಯಲ್ಲಿ ಸೇವೆ ಸಲ್ಲಿಸಿ, ನಂತರ ಮಂಗಳೂರಿನಲ್ಲಿ ನೆಲೆಸಿ ಚಂದ್ರದೀಪ ನೃತ್ಯ ತರಬೇತಿ ಶಾಲೆಯನ್ನು ಸ್ಥಾಪಿಸಿದ ತರುವಾಯ, ಸುಮಾರು ೬ ವರ್ಷಗಳಿಂದ ಶ್ರೀಮತಿ ವಿನಯಾ ಕೃಷ್ಣಮೂರ್ತಿ ಅವರ ಮಾರ್ಗದರ್ಶನದಲ್ಲಿ ಶ್ರೀ ಲಕ್ಷ್ಮೀ ನರಸಿಂಹ ಕಲ್ಯಾಣ ಮಂಟಪದಲ್ಲಿ ನಾಟ್ಯನಿಕೇತನ ಮುನ್ನಡೆಯುತ್ತಿದೆ.

ವಿನಯಾ ಕೃಷ್ಣಮೂರ್ತಿ ಮಂಗಳೂರಿನ ವಿದುಷಿ ಕಮಲಾ ಭಟ್, ಮಂಡ್ಯದ ವಿದುಷಿ ಚೇತನಾ ರಾಧಾಕೃಷ್ಣ ಅವರ ಗರಡಿಯಲ್ಲಿ ಪಳಗಿದವರು. ಸುಮಾರು ೨೦ ವರ್ಷಗಳಿಂದ ಸುಮಾರು ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳನ್ನು ಪೋಷಿಸುತ್ತಾ, ಮುನ್ನಡೆಸುತ್ತಾ ಬಂದಿರುವ ಈ ಸಂಸ್ಥೆಯ ವಿದ್ಯಾರ್ಥಿಗಳು ಹಲವು ಸಾಧನೆಗಳಿಗೆ ಮುನ್ನುಡಿ ಬರೆದಿದ್ದಾರೆ.





***<u>ಸೌರಭ ನೃತ್ಯ ಕಲಾ ಪರಿಷತ್</u> :*** ಶ್ರೀಮತಿ ವಿದುಷಿ ಶ್ರೀವಿದ್ಯಾ ಮುರಳೀಧರ್(ರಾಮನ್) ಅವರ ಕನಸಿನ ಕೂಸಾಗಿ ಮೈ ತಳೆದದ್ದೇ ಸೌರಭ. ಸುಮಾರು ೧೫ ವರ್ಷಗಳ ಹಿಂದೆ ವಿದುಷಿ ಅಂಬಳೆ ರಾಜೇಶ್ವರಿ ಅವರಿಂದ ಪ್ರಾಥಮಿಕ ವಿದ್ಯಾಭ್ಯಾಸ ಪಡೆದು ಪಂದನಲ್ಲೂರು ಶೈಲಿಯ ಖ್ಯಾತ ನೃತ್ಯ ಗುರುಗಳಾದ ಮುರಳೀಧರರಾವ್ ಅವರಲ್ಲಿ ವಿದ್ಯಾಭ್ಯಾಸ ಕೈಗೊಂಡ ಶ್ರೀವಿದ್ಯಾ, ನಾಡ–ಹೊರನಾಡ ಸ್ಪರ್ಧೆ, ದೂರದರ್ಶನ ಪ್ರದರ್ಶನಗಳಲ್ಲಿ ಪ್ರಶಸ್ತಿ, ಸನ್ಮಾನ ಪುರಸ್ಕೃತರು. ಮುರಳೀಧರರಾಯರ ಗ್ರಂಥ 'ನೃತ್ಯಲೋಕ'ದ ನೃತ್ಯ ಕಲಾವಿದೆಯ ಭಂಗಿಗಳ ಛಾಯಾಚಿತ್ರ ಇವರ ಪ್ರತಿಭೆಗೆ ಸಾಕ್ಷಿ ಎಂಬಂತಿದೆ.

ಇಂಗ್ಲೀಷ್ ಸ್ನಾತಕೋತ್ತರ ಪದವಿ ಪೂರೈಸಿ, ಹಂಪಿ ವಿಶ್ವವಿದ್ಯಾನಿಲಯದಿಂದ ಭರತನಾಟ್ಯ ನಾಯಕ–ನಾಯಿಕಾ ಭಾವಗಳ ಕುರಿತಾಗಿನ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಇವರ ಕಿರಿಯ ಸಹೋದರಿ ಶ್ರೀಮತಿ ವಿದುಷಿ ಶ್ರೀಧನ್ಯಾ ರಾಮನ್ ಇವರೂ ಅಕ್ಕನೊಂದಿಗೆ ಒಡಗೂಡಿದ ಉತ್ತಮ ಕಲಾವಿದೆ. ದಶಕಗಳ ಹಿಂದೆ ಪುಟಾಣಿನಗರದ ಬಳಿ ಪ್ರಾರಂಭವಾದ ಈ ನೃತ್ಯ ಸಂಸ್ಥೆಯಲ್ಲಿ ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ತರಬೇತಿ ಪಡೆದು ನಾಡಿನಾದ್ಯಂತ ಮಿಂಚಿದ್ದಾರೆ.

***<u>ನೃತ್ಯ ನಿನಾದ</u> :*** ವಿದುಷಿ ನಿರ್ಮಲಾ ಬೋಪಣ್ಣ ಅವರ ನಿರ್ದೇಶನದಲ್ಲಿ ಪೊನ್ನಂಪೇಟೆಯಲ್ಲಿ ದಶಕಗಳ ಹಿಂದೆ ಬೆಳೆದು ಬಂದ ಸಂಸ್ಥೆ, ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಂಗೀತ–ನೃತ್ಯ–ತಾಳವಾದ್ಯಗಳಲ್ಲಿ ತರಬೇತಿ ನೀಡುತ್ತಾ, ರಾಜ್ಯಮಟ್ಟದ ಸ್ಪರ್ಧೆಗಳಿಗೆ ಆತಿಥೇಯವಾಗುತ್ತಾ ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಗೀತ ಸ್ನಾತಕೋತ್ತರ ಪದವಿಯನ್ನು ಉನ್ನತ ದರ್ಜೆಯಲ್ಲಿ ಪೂರೈಸಿದ ಆಕಾಶವಾಣಿ–ದೂರದರ್ಶನ ಕಲಾವಿದೆ ಇವರು. ಇವರ ವಿದ್ಯಾರ್ಥಿಗಳು ನಾಡಿನಾದ್ಯಂತ ಮೆಚ್ಚುಗೆ ಗಳಿಸಿದ್ದಾರೆ.

***<u>ನೃತ್ಯ ಮಂಟಪ ಟ್ರಸ್ಟ್</u> :*** ಕಳೆದ ೩ ವರ್ಷಗಳಿಂದೀಚೆಗೆ ಶ್ರೀಮತಿ ವಿದುಷಿ ರೂಪಾ ಶ್ರೀಕೃಷ್ಣ ಉಪಾಧ್ಯ ಅವರ ನೇತೃತ್ವದಲ್ಲಿ ಮಡಿಕೇರಿಯ ಕಾವೇರಿ ಬಡಾವಣೆಯಲ್ಲಿ ಮುನ್ನಡೆಯುತ್ತಿರುವ ಟ್ರಸ್ಟ್, ಕಲಾಕ್ಷೇತ್ರ ಪದ್ಧತಿಯಲ್ಲಿ ಹಲವು ವಿದ್ಯಾರ್ಥಿಗಳಿಗೆ ಮಾರ್ಗದರ್ಶನವೀಯುತ್ತಾ ಬಂದಿದೆ. ಪ್ರಾರಂಭವಾದ ಅಲ್ಪ ಕಾಲದಲ್ಲಿಯೇ ಈ ಸಂಸ್ಥೆಯ ವಿದ್ಯಾರ್ಥಿಗಳು ನಾಡಿನಾದ್ಯಂತ ಮಿಂಚಿ ಉತ್ತಮ ಯಶಸ್ಸು ಗಳಿಸಿದ್ದಾರೆ.

ಶಿವಮೊಗ್ಗದ ನಾಟ್ಯಗುರು ವಿದ್ವಾನ್ ಜನಾರ್ಧನ, ಬೆಂಗಳೂರಿನ ವಿಶ್ರುತ ಪರ್‌ಫಾರ್ಮಿಂಗ್ ಆರ್ಟ್ಸ್‌ನ ವಿದುಷಿ ಬಿ. ಕೆ. ವಸಂತಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಪಳಗಿ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಭರತನಾಟ್ಯ ಸ್ನಾತಕೋತ್ತರ ಪದವಿಯನ್ನು ಉನ್ನತ ದರ್ಜೆಯಲ್ಲಿ ಪಡೆದವರು. ಮೂಲತಃ ಶಿವಮೊಗ್ಗದವರಾದ ರೂಪಾ ಉಪಾಧ್ಯ,

ಗುರುವಾಗಿ ಮತ್ತು ಕಲಾವಿದೆಯಾಗಿ ದೂರದರ್ಶನ, ಹೊರನಾಡ ಕನ್ನಡಿಗರಿಂದಲೂ ಮೆಚ್ಚುಗೆಗೆ ಪಾತ್ರರಾಗಿ ಹಲವು ಸನ್ಮಾನ ಪುರಸ್ಕೃತರು.

***<u>ಭಾರತೀಯ ವಿದ್ಯಾಭವನ</u> :*** ಭಾರತೀಯ ಲಲಿತಕಲೆಗಳ ಬಗ್ಗೆ ಶಿಕ್ಷಣ ಮತ್ತು ಅಧ್ಯಯನದ ಮನೋಭಾವ ಬೆಳೆಸುವ ದೇಶಾದ್ಯಂತ ಹಬ್ಬಿದ ಭಾರತೀಯ ವಿದ್ಯಾಭವನದ ಕೊಡಗು ಶಾಖೆಯು ಹಲವು ಕಾರ್ಯಾಗಾರ, ಉಪನ್ಯಾಸಗಳನ್ನು ನಡೆಸುತ್ತಾ ಬಂದಿದೆ. ಸ್ಪಿಕ್ ಮೆಕೆಯ ಹಲವು ಕಾರ್ಯಕ್ರಮಗಳಿಗೆ ಶ್ರೀ ಓಂಕಾರೇಶ್ವರ ದೇವಸ್ಥಾನದ ಬಳಿಯ ವಿದ್ಯಾಭವನ ತನ್ನ ಆವರಣವನ್ನು ಆಸರೆಯಾಗಿ ನೀಡಿದೆ. ಪ್ರಾರಂಭಿಕ ಗುರುಗಳಾಗಿ ಮಂಡ್ಯದ ಗುರು ಚೇತನಾ ರಾಧಾಕೃಷ್ಣ ವಿದ್ಯಾರ್ಥಿಗಳಿಗೆ ತರಬೇತಿಯನ್ನಿತ್ತರೆ, ಪ್ರಸಕ್ತ ವಾಣಿ ಅವರು ಗುರುವಾಗಿ ಮುಂದುವರಿಯುತ್ತಿದ್ದಾರೆ.

ಇವರಷ್ಟೇ ಅಲ್ಲದೆ ಮಾದಾಪುರದ ಶ್ರೀ ಶಂಕರಯ್ಯ ಮಾಸ್ಟರ್, ವಿರಾಜಪೇಟೆಯ ಶ್ರೀನಿವಾಸ್ ಅವರದ್ದು ಕೊಡಗಿನ ನೃತ್ಯ ಗುರುಗಳ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿ ಕೇಳಿ ಬರುವ ಹೆಸರು. ಜೊತೆಗೆ ಬಾಲಕೃಷ್ಣ, ಭಾರತೀ ರಮೇಶ್, ಪಕ್ಕದ ಜಿಲ್ಲೆಗಳಿಂದ ಬಂದು ನೃತ್ಯ ಕಲಿಸುವ ಹಲವು ಗುರುಗಳು ಜಿಲ್ಲೆಯ ಕಲೆಯ ಸೊಬಗನ್ನು ಹೆಚ್ಚಿಸುತ್ತಿದ್ದಾರೆ.

# ಪ್ರಕಟಣೆ

ಇತ್ತೀಚೆಗೆ ಅಮೆರಿಕಾದ ಚಿಕಾಗೋದಲ್ಲಿ ನಡೆದ 'ಅಕ್ಕ' – ವಿಶ್ವ ಕನ್ನಡ ಸಮ್ಮೇಳನದ ಸ್ಮರಣ ಸಂಚಿಕೆಗಾಗಿ ಆಯೋಜಿಸಿದ್ದ ಜಾಗತಿಕ ಮಟ್ಟದ ಬರಹ ಆಯ್ಕೆ ಸ್ಪರ್ಧೆಯಲ್ಲಿ 'ವಿಶ್ವ ಕನ್ನಡಿಗರ ಪ್ರತಿಭೆ ಮತ್ತು ಪರಂಪರೆಯ ಪ್ರದರ್ಶನ' ಎಂಬ ಮುಖ್ಯವಸ್ತುವಿನಡಿ ನೂಪುರ ಭ್ರಮರಿಯ ಸಂಪಾದಕಿ ಮನೋರಮಾ ಬಿ.ಎನ್. ಅವರು ಬರೆದ ಪ್ರದರ್ಶಕ ಕಲೆಗಳಲ್ಲಿ ಕನ್ನಡಿಗರ ಫ್ಯೂಷನ್ ಪರಂಪರೆ ಎಂಬ ಲೇಖನಕ್ಕೆ ಪ್ರಥಮ ಸ್ಥಾನ ಲಭಿಸಿದ್ದು, ಪತ್ರಿಕೆಯ ಬಳಗದ ಬೆಂಗಳೂರಿನ ಕಪಿಲಾ ಶ್ರೀಧರ್ ಅವರ ಕಥೆಯೂ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾಗಿರುತ್ತದೆ. ಇವರೀರ್ವರಿಗೂ ಅಭಿನಂದನೆಗಳು. ಮತ್ತು ಸಹಕರಿಸಿದ, ಪ್ರೋತ್ಸಾಹಿಸಿದ ಸಮಸ್ತ ಸಹೃದಯರಿಗೂ, ಮಾಧ್ಯಮದವರಿಗೂ ಕೃತಜ್ಞತೆಗಳು.

**–'ಭ್ರಮರಿ' ಬಳಗ**







# 'ಭ್ರಮರಿ'ಯ ಬಳಗದ ಸದಸ್ಯರಿವರು

**ಮ**ನೋರಮಾ ಬಿ.ಎನ್– ಪ್ರಧಾನ ಸಂಪಾದಕರು ( ಪತ್ರಿಕೋದ್ಯಮ ಉಪನ್ಯಾಸಕಿ, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು)
ವಿಷ್ಣುಪ್ರಸಾದ್ ನಿಡ್ಡಾಜೆ – ವಿತರಣಾ ಮುಖ್ಯಸ್ಥ, (ಫೆಡರಲ್ ಬ್ಯಾಂಕ್) ಮಂಗಳೂರು
ಶ್ರೀಲಕ್ಷ್ಮಿ ಎಂ. – ಸಂಪಾದಕ ಮಂಡಳಿ ಸದಸ್ಯರು, (ಡೆಕ್ಕನ್ ಹೆರಾಲ್ಡ್–ಉಪಸಂಪಾದಕರು) ಬೆಂಗಳೂರು
ರಾಮಚಂದ್ರ ಹೆಗಡೆ –ಸಂಪಾದಕ ಮಂಡಳಿ ಸದಸ್ಯರು,( ಚೈತ್ರರಶ್ಮಿ', ಸಂಪಾದಕ) ಬೆಂಗಳೂರು
ಮಹೇಶ್ ಎಲ್ಯಡ್ಕ– ವೆಬ್ಸೈಟ್ ನಿರ್ವಹಣೆ, (ಧ್ಯೇಯ ಟೆಕ್ನೋಲಜೀಸ್), ಬೆಂಗಳೂರು
ಸುನಿಲ್ ಕುಲಕರ್ಣಿ– ಮುದ್ರಣ ವಿಭಾಗ, (ಅಕ್ಷರೋದ್ಯಮ) ಮಂಗಳೂರು
ರಾಜಗೋಪಾಲ್ ಬಿ. ಎನ್– ನಿರ್ವಹಣಾ ವಿಭಾಗ, (ಪದವಿ ವಿದ್ಯಾರ್ಥಿ) ಮಡಿಕೇರಿ
ರಾಧಿಕಾ ವಿಟ್ಲ – (ವರದಿಗಾರರು,ಸುವರ್ಣ ನ್ಯೂಸ್ ವಾಹಿನಿ) ಬೆಂಗಳೂರು
ಪ್ರಿಯಾ ಕೆರ್ವಾಶೆ– (ವರದಿಗಾರರು, ಸುವರ್ಣ ನ್ಯೂಸ್ ವಾಹಿನಿ) ಬೆಂಗಳೂರು
ಹರೀಶ್ ಆದೂರು– (ಉಪಸಂಪಾದಕರು, ಸಂಯುಕ್ತ ಕರ್ನಾಟಕ) ಮಂಗಳೂರು
ಅಕ್ಷಯರಾಮ ಕೆ. – ತೋಟಗಾರಿಕಾ ಸ್ನಾತಕೋತ್ತರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ
ಕಪಿಲಾ ಶ್ರೀಧರ್ – ( ಬರಹಗಾರರು, ಮಾನಸಿಕ ಸಲಹಾ ತಜ್ಞರು), ಬೆಂಗಳೂರು
ಡಾ। ನಡಿಬೈಲು ಉದಯಶಂಕರ್– (ವೈದ್ಯರು, ಬರಹಗಾರರು) ಮಡಿಕೇರಿ
ಉಜಿರೆ ಅಶೋಕ್ ಭಟ್– (ಯಕ್ಷಗಾನ ಕಲಾವಿದರು, ಶ್ರೀರಾಮಚಂದ್ರಾಪುರ ಯಕ್ಷಗಾನ ಮೇಳದ ವ್ಯವಸ್ಥಾಪಕರು) ಉಜಿರೆ.
ಎನ್. ರಾಮ ಭಟ್ –( ಬರಹಗಾರರು) ಉಡುಪಿ
ಅನಘಶ್ರೀ ಅಭಯ್– (ಕಲಾವಿದೆ) ಸೌತ್ ಕೆರೋಲಿನಾ, ಯುಎಸ್ಎ
ಪರಶುರಾಮ ಕಾಮತ್– ( ಪತ್ರಿಕೋದ್ಯಮ ಉಪನ್ಯಾಸಕರು, ಭಂಡಾರ್ಕರ್ಸ್ ಕಾಲೇಜು) ಕುಂದಾಪುರ
ಶ್ರೀನಿಧಿ ಅಡಿಗ– ( ವರದಿಗಾರರು, ದಿ ಇಂಡಿಯನ್ ಎಕ್ಸ್‌ಪ್ರೆಸ್) ಮಂಗಳೂರು
ಶ್ವೇತಾ ನಿಡ್ಲೆ –( ಉಪಸಂಪಾದಕರು, ಕನ್ನಡಪ್ರಭ), ಮಂಗಳೂರು
ಮೌಲ್ಯಾ ಜೀವನ್– (ಪತ್ರಿಕೋದ್ಯಮ ವಿಭಾಗ ಮುಖ್ಯಸ್ಥೆ, ಆಳ್ವಾಸ್ ಕಾಲೇಜು) ಮೂಡಬಿದಿರೆ.

ಭ್ರಮರಿಯ ಮುದ್ರಣ ನಿಧಿಗೆ ಸಹಕರಿಸಿದ, ಹಾರೈಸಿದ ಸರ್ವ ಸನ್ಮಾನ್ಯರೂ, ಗುರುಹಿರಿಯರೂ ಬಳಗದಲ್ಲಿದ್ದಾರೆ. ಅವರ ಪರಿಚಯ ಮುಂದಿನ ಸಂಚಿಕೆಯಲ್ಲಿ...

ಮತ್ತಷ್ಟು ಸನ್ಮಿತ್ರರಿಗೆ ಬಳಗಕ್ಕೆ ಸ್ವಾಗತ. ನಿಮ್ಮ ಒಪ್ಪಿಗೆಯನ್ನು ನಮಗೆ ತಿಳಿಸಿ. ನೃತ್ಯ ಜಗತ್ತಿನ ಪರಿಭ್ರಮಣದಲ್ಲಿ ನಾವೆಲ್ಲರೂ ಒಟ್ಟಾಗೋಣ.

# ನೃತ್ಯದಲ್ಲಿ ಕಲ್ಪನೆ ಮತ್ತು ವಾಸ್ತವವಾದ

–ಮನೂ 'ಬನ'

**ಪ್ರೇರಣೆ : 'ಮಂಥನ' ಕಾರ್ಯಕ್ರಮ**

**ರಂಗ ಭ್ರಮರಿ**

*ಕಲ್ಪನೆ ಮತ್ತು ವಾಸ್ತವವಾದ ಎಂಬೀ ಎರಡು ಶಬ್ದಗಳಿಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಅದರದ್ದೇ ಆದ ವ್ಯಾಖ್ಯೆಗಳಿವೆ. ಯಾವುದು ಇದೆಯೋ, ಯಾವುದು ಇತ್ತು ಎನ್ನಲಾಗಿತ್ತೋ, ಯಾವುದು ಇರಬಹುದೋ, ಯಾವುದು ಇರಬೇಕು ಅಂತ ಅಂದುಕೊಳ್ಳುತ್ತೇವೆಯೋ..; ಹೀಗೆ ಇದ್ದ ಹಾಗೆ, ಇರುವ ಹಾಗೆ, ಇದೆ ಎಂದು ಹೇಳುವ ಹಾಗೆ, ಹೇಗೆ ಇರತಕ್ಕದ್ದೋ ಹಾಗೆ,..ಒಂದನ್ನೊಂದು ಅನುಕರಿಸುವುದೇ ವಾಸ್ತವ ಎನ್ನುತ್ತಾನೆ ಅರಿಸ್ಟಾಟಲ್. ಅಷ್ಟಕ್ಕೂ ವಾಸ್ತವದ ಪರಿಕಲ್ಪನೆ ಆಧುನಿಕ ಕಾಲದಲ್ಲಿ ಗಟ್ಟಿಗೊಂಡದ್ದು ಪಶ್ಚಿಮದ ಕೈಗಾರಿಕಾ ಕ್ರಾಂತಿಯ ನಂತರ. ಎಲ್ಲವೂ ಕೂಡಾ ವಿಜ್ಞಾನದ ರೀತಿಯಲ್ಲಿಯೇ ಪರಿಶೀಲನೆಗೊಳಪಡಿಸಿ ಪ್ರಯೋಗಕ್ಕೆ ಒಳಪಟ್ಟು ಸತ್ಯವೆಂದು ಸಾಬೀತಾಗಬೇಕು. ಹಾಗಾಗಿ ವಾಸ್ತವವಾದ ಎಂದರೆ ಇಂದ್ರಿಯಾತೀತ, ಅಂತರ್ದೃಷ್ಟಿ ಕಾಣ್ಕೆಗಳು ವಾಸ್ತವ ಅಲ್ಲ ಎಂಬ ಚಿಂತನೆ ಹುಟ್ಟಿಕೊಂಡದ್ದು!*

ಹಾಗಾದರೆ ನೃತ್ಯದಲ್ಲಿ ನಾವು ಬಿಂಬಿಸುವ ಅಷ್ಟೂ ಘಟನೆಗಳು ಕಾಲ್ಪನಿಕವೇ? ಕಲ್ಪನೆಯೇ? ವಾಸ್ತವ ಎಂಬುದಿದ್ದರೆ ಅದು ಯಾವುದು? ನೃತ್ಯ ವಾಸ್ತವವನ್ನು ತೋರಿಸುವ ಮಾಧ್ಯಮವಾಗಬಾರದೇ? ಪುರಾಣದ ಘಟನೆಗಳನ್ನು ಅನುಕರಿಸಿ ತೋರಿಸುವ ರೀತಿ ನಮ್ಮ ವಸ್ತುಸ್ಥಿತಿಯನ್ನು ಮರೆಸುವ ಪ್ರಯತ್ನವೇ? ಹಾಗಾದರೆ ವಸ್ತುಸ್ಥಿತಿಯನ್ನು ಹೇಳುವ ಪ್ರಯತ್ನ ಹೇಗೆ ಸಾಕಾರವಾದೀತು? ಪ್ರೇಕ್ಷಕ ಯಾವುದನ್ನು ಇಷ್ಟಪಡುತ್ತಾನೆ- ಕಲ್ಪನೆಯನ್ನೋ, ವಾಸ್ತವವನ್ನೋ ಅಥವಾ ಕಲ್ಪನೆಯೊಳಗಿನ ವಾಸ್ತವವನ್ನೋ? ಅಷ್ಟಕ್ಕೂ ಕಲೆ ಎಂಬುದು ವಿಜ್ಞಾನ ಅಲ್ಲ ಅನ್ನುತ್ತೀರಾ? ಯೋಚಿಸೋಣ...

ಭರತನ ನಾಟ್ಯಶಾಸ್ತ್ರದಲ್ಲಿ ಅನುಕಾರ್ಯರು ಮತ್ತು ಅನುಕರ್ತರು ಎಂಬೆರಡು ಪರಿಕಲ್ಪನೆಯಿದೆ. ಅನುಕಾರ್ಯರು ಎಂದರೆ ಪುರಾಣದಲ್ಲಿ ಬರುವ ಪಾತ್ರಗಳು. ಉದಾ: ರಾಮ, ಕೃಷ್ಣ, ದುರ್ಯೋಧನ ಇತ್ಯಾದಿ..., ಅನುಕರ್ತರು





ಎಂದರೆ ಆ ಪಾತ್ರಗಳನ್ನು ನಟಿಸಿ ತೋರಿಸುವವರು, ಅಂದರೆ ಕಲಾವಿದರು. ಆ ಮೂಲಕ ಆಯಾಯ ಕಾಲದಲ್ಲಿ ಆದ ಮತ್ತು ಆಗುತ್ತಿರುವ ವಸ್ತುಸ್ಥಿತಿಯನ್ನು ಕಲಾವಿದ ಅನುಕರಿಸಿ ತೋರಿಸುತ್ತಾನೆ. ಆಗ ಅಲ್ಲಿ ಉತ್ಪನ್ನವಾಗುವ ರಸ, ಸ್ಫುರಿಸುವ ಭಾವ, ಕಲಾವಿದನಿಗೆ ಮತ್ತು ವೀಕ್ಷಕನಿಗೆ ಹುಟ್ಟುವ ಸೃಷ್ಟಿಶೀಲತೆ, ಚಿಂತನೆ, ಹೊಸತಿನ ಪರಿಭಾಷೆ ಎಲ್ಲವೂ ವಾಸ್ತವವನ್ನು ಸಮೀಪಿಸುತ್ತದೆ.

ಅದರ ಮೂಲಕ ವೀಕ್ಷಕ ಮತ್ತು ಕಲಾವಿದ ತಮ್ಮನ್ನು ತಾವು ಪರಾಮರ್ಶೆ ಮಾಡಿಕೊಳ್ಳುವ, ಮತ್ತಷ್ಟು ವಾಸ್ತವದ ಕಡೆಗೆ ದೃಷ್ಟಿ ಹರಿಸುವ, ಅದರಲ್ಲೇ ಮುಳುಗಿಹೋಗುವ ಪರಿ ಆ ನೃತ್ಯ ಸಮಯದ ವಾಸ್ತವ ಎನಿಸಿಕೊಳ್ಳುತ್ತದೆ. ಜೊತೆಗೇ ನೃತ್ಯವೂ ಬದುಕನ್ನು ಚಿತ್ರಿಸುತ್ತಾ ಸಾಗುತ್ತದೆ. ಹೀಗೆ.., ಕಲ್ಪನೆಯೋ ಅಥವಾ ದಾಖಲಾದ ಇತಿಹಾಸವೋ ಅನುಕರ್ತರ ಮೂಲಕ ಪ್ರೇಕ್ಷಕನು ತನಗೆ ಕಂಡ ಮತ್ತು ಕಾಣುವ ವಸ್ತುಸ್ಥಿತಿಯನ್ನು ಸಮೀಪಿಸುತ್ತಾನೆ ಎನ್ನುವುದು ಸುಸ್ಪಷ್ಟ. ಇಲ್ಲಿ ವಾಸ್ತವವೇ ಆನಂದ. ಮತ್ತು ಕಲೆಯೊಂದರ ಮೂಲ ಗುರಿಯೂ ಕೂಡಾ ಅದೇ ಹೌದು. ಈ ಮೂಲಕ ಇಂದ್ರಿಯಗ್ರಾಹ್ಯವಾದದ್ದಷ್ಟೇ ವಾಸ್ತವ ಅಲ್ಲ ಎಂಬುದನ್ನು ಸಾಬೀತುಪಡಿಸುವುದಿದ್ದರೆ ಅದು ಕಲೆ. ಕಲ್ಪನೆಯ ಸಾಂಗತ್ಯದಲ್ಲಿ ವಾಸ್ತವವನ್ನು ಮುಟ್ಟಲು ಸಾಧ್ಯ ಎಂಬುದನ್ನು ಕಲಾ ಜಗತ್ತು ತೋರಿಸಿಕೊಟ್ಟಿದೆ !

ಸಂಸ್ಕೃತಿ ಬೆಳೆದು ಬಂದ ಹಾಗೆ ಈ ವಾಸ್ತವ ಮತ್ತು ಕಲ್ಪನೆಯ ಪರಿಕಲ್ಪನೆಯೂ ಬದಲಾಗುತ್ತಲಿದೆ. ಅದರಲ್ಲೂ ನೃತ್ಯದಲ್ಲಿ ಮಾಂತ್ರಿಕ ವಾಸ್ತವವಾದದ ಪ್ರಭಾವವೇ ಹೆಚ್ಚು. ಚಂದಮಾಮದ ಕಥೆಗಳಂತಿರುವ ಕಥೆಗಳಿಗೆ ನೃತ್ಯ ಮತ್ತು ಅದರ ಅಭಿನಯವು ಜೀವ ನೀಡುತ್ತದೆ. ಕಲ್ಪನೆಯ ಮೂಸೆಯಲ್ಲಿಯೂ ವಾಸ್ತವದ ದರ್ಶನ ಸಾಧ್ಯ. ಅಂತೆಯೇ ವಾಸ್ತವವ ದರ್ಶನದಲ್ಲಿಯೂ ಮತ್ತೊಂದಷ್ಟು ಕಲ್ಪನೆಗಳನ್ನು ಹೆಣೆಯಲು ಸಾಧ್ಯ. ಇಂದ್ರಿಯಗ್ರಹಿಕೆಯಾಗಿ ಕಲ್ಪನೆ ದಕ್ಕುವುದಾದಲ್ಲಿ ಅದು ಕಲೆಯಲ್ಲಿಯೇ ಸರಿ ! ಅಂತೆಯೇ ಇಂದ್ರಿಯಗ್ರಾಹ್ಯವಾಗದೇ ವಾಸ್ತವವನ್ನು ಮುಟ್ಟುವುದಿದ್ದರೂ ಅದು ಕಲೆಯಲ್ಲಿಯೇ?

ಈ ಮೂಲಕ ನಮ್ಮನ್ನು ನಾವು ದರ್ಶಿಸಿಕೊಳ್ಳುವ ರೀತಿ ಅಸಾಧಾರಣ. ಅಷ್ಟಕ್ಕೂ ಹಲವು ಬಾರಿ ಇಂತಹ ಕಲ್ಪನೆ ಮತ್ತು ವಾಸ್ತವವನ್ನು ಒಂದು ಮಾಡಿಕೊಂಡು ನೀಡಿದ ಜಾನಪದ ನೃತ್ಯ-ಸಂಗೀತಗಳು ಕಲೆಯ ಅಸಾಧ್ಯ ಸಾಧ್ಯತೆಗಳನ್ನು ಪರಿಚಯಿಸಿವೆ. ಆದರೆ ಇವೆರಡರ ಬಾಂಧವ್ಯ, ಸ್ವಾರಸ್ಯ ನಿರೂಪಿಸುವಿಕೆ ಈಗೀಗ ವಿರಳವಾಗುತ್ತಿದೆ.

ಪ್ರತಿಯೋರ್ವರ ವಾಸ್ತವಗಳೂ ವಿಭಿನ್ನ. ನೋಡುವ ಬಗೆಯಲ್ಲಿ ಅವರವರಿಗೆ ಅನ್ನಿಸಿದ ವಾಸ್ತವ ಬದಲಾಗುತ್ತಿರುತ್ತದೆ. ಹಾಗಾಗಿ ವಾಸ್ತವ ಎಂಬುದಕ್ಕೆ ಚೌಕಟ್ಟಿಲ್ಲ. ಕೆಲವೊಮ್ಮೆ ನಾವು ರೂಢಿಸಿಕೊಂಡು ಬಂದ ಸತ್ಯಗಳೇ ವಾಸ್ತವ ಆಗಿರುವುದು ಬಹುಪಾಲು ಮಟ್ಟಿಗೆ ನಿಜ. ವಾಸ್ತವ ವ್ಯಕ್ತಿನಿಷ್ಟವಾದದ್ದು !

ಯಕ್ಷಗಾನ ಮತ್ತು ತಾಳಮದ್ದಳೆಯಲ್ಲಿ ಕಲಾವಿದರು ಪ್ರತೀ ಪಾತ್ರಕ್ಕೂ ಪ್ರತಿದಿನವೂ ಹೊಸ-ಹೊಸ ವ್ಯಾಖ್ಯಾನ ಕೊಡುತ್ತಲೇ ಸತ್ಯದ ಪರಿಕಲ್ಪನೆಯನ್ನು ತಮ್ಮ ತಮ್ಮ ನಿಲುವುಗಳಿಂದ ನೋಡಿಕೊಳ್ಳುತ್ತಾ ಸೃಷ್ಟಿಶೀಲತೆಯನ್ನು ನಿರಂತರ ಚಾಲನೆಯಲ್ಲಿಟ್ಟಿರುತ್ತಾರೆ. ಹಾಗಾಗಿ ಅದೊಂದು ನಿರಂತರ ಬದಲಾಗುವಿಕೆ ! ಮಾತ್ರವಲ್ಲ, ಪ್ರಾಮಾಣಿಕವಾಗಿ ಬದುಕಿನ ವಿವಿಧ ಮುಖಗಳನ್ನು ಅದರ ಸಮಗ್ರತೆಯೊಂದಿಗೆ, ಸಂಕೀರ್ಣತೆಯೊಂದಿಗೆ ಹಿಡಿದಿಡುವ ಜೀವನ ದೃಷ್ಟಿ.

ಅಷ್ಟಕ್ಕೂ ವಾಸ್ತವ ಎಂದಾಕ್ಷಣ ಇದ್ದದನ್ನು ಇದ್ದ ಹಾಗೆ, ಸಂಪೂರ್ಣ ಎಲ್ಲಾ ವಿವರಗಳನ್ನು ಹೇಳುವ ಅಗತ್ಯವಿದೆಯೇ? ಎಲ್ಲವನ್ನೂ ವಾಚ್ಯವಾಗಿಸುವುದರಲ್ಲಿ ಆನಂದದ ಅನುಭೂತಿ ದಕ್ಕಲು ಸಾಧ್ಯವೇ? ಇಲ್ಲ. ಹಾಗಾಗಿಯೇ ಕಲಾವಿದನು, ವಾಸ್ತವದ ಚಿತ್ರಣವನ್ನು ತುಂಬಿಸಿಕೊಳ್ಳಲಿಕ್ಕೆ ಪ್ರೇಕ್ಷಕನಿಗೆ ಅವಕಾಶ ಮಾಡಿಕೊಡಬೇಕು. ಎಲ್ಲವನ್ನೂ ವಾಚ್ಯವಾಗಿಸಿದರೆ ಪ್ರೇಕ್ಷಕನ ಸಾಮರ್ಥ್ಯವನ್ನು ಅಲ್ಲಗಳೆದಂತಾಗುವುದು ಸತ್ಯ. ಜೊತೆಗೆ ಸಮರ್ಥ ಪ್ರೇಕ್ಷಕನಷ್ಟೇ ಕಲಾವಿದ ಹೇಳದೇ ಬಿಟ್ಟದ್ದನ್ನು ತುಂಬಿಸಿಕೊಳ್ಳಲಿಕ್ಕೆ ಶಕ್ತನಾಗಿರುತ್ತಾನೆ.

ಆದರೆ ಎಲ್ಲಾ ನೃತ್ಯ ಪ್ರದರ್ಶನಗಳಲ್ಲಿ ಇಂತಹ ಛಾಯೆ ಇರುತ್ತದೆ ಎಂದು ಹೇಳಲಾಗದು. ಇಂದಿನ ಬಹುತೇಕ ನೃತ್ಯ ಪ್ರದರ್ಶನಗಳಲ್ಲಿ ಅನುಭವಿಸಿ ಮಾಡುವ ಪ್ರತಿಭೆ ಮರೆಯಾಗುತ್ತಿರುವುದರಿಂದ ಮತ್ತು ಗಿಣಿಪಾಠ ಒಪ್ಪಿಸುವ ಪರಿಪಾಠವೇ ಚಾಲ್ತಿಯಲ್ಲಿರುವುದರಿಂದ ಸೃಷ್ಟಿಶೀಲತೆಯ ಚಲನೆ, ಅದರೊಳಗಿನ ವಾಸ್ತವಗಳು ಸ್ವತಃ ಕಲಾವಿದನಿಗೆ ಅರಿವಾಗುವುದಿಲ್ಲ. ಆ ಮೂಲಕ ರಂಗದಲ್ಲಿ ತಾನು ಏನನ್ನು ಸಂವಹಿಸಬೇಕು ಎಂಬ ಪ್ರಜ್ಞೆ ಕಲಾವಿದನಿಗೆ ಇಲ್ಲದೇ, ಪ್ರೇಕ್ಷಕನಿಗೂ ಅಂತಹ ವಾಸ್ತವದ ಆನಂದ ಅರಿವು ಆಗುವುದಿಲ್ಲ. ನಮ್ಮ ನಮ್ಮ ಸತ್ಯಗಳನ್ನು ಕಂಡುಕೊಳ್ಳುವಲ್ಲಿ, ನಮ್ಮಲ್ಲಿ ಸುಪ್ತವಾಗಿ ಅಡಗಿರುವುದನ್ನು ನೆನಪು ಮಾಡಿಕೊಳ್ಳುವಲ್ಲಿನ ವಾಸ್ತವ ಇಲ್ಲಿ ಮರೆಯಾಗುತ್ತದೆ.

ತಾನು ಬದುಕುವ ಜೀವನದ ಕುರಿತು ಪ್ರೇಕ್ಷಕನಿಗೆ ಇನ್ನೊಂದು ಸಲ ನೋಡಿಕೊಳ್ಳಬೇಕು ಅಂತಾದಲ್ಲಿ ಅದು ವಾಸ್ತವ ಮತ್ತು ಅಂತಹ





ಪ್ರದರ್ಶನಗಳೊಳಗೆ ಕಲಾವಿದ ಮಾತ್ರವಲ್ಲದೆ ಪ್ರೇಕ್ಷಕನೂ ಮುಳುಗಿ ಏಳುತ್ತಾನೆ. ನಮ್ಮಲ್ಲಿ ಯಾವುದು ಬೆಳೆಯುತ್ತಾ ಹೋಗುವುದೋ ಅದು ವಾಸ್ತವ. ಅಂತಹ ಸೃಷ್ಟಿಶೀಲತೆ ಕಲೆಯಲ್ಲಿ ನಿರಂತರ ಇದ್ದಾಗಲೇ ಜೀವನವನ್ನು ಮತ್ತೊಮ್ಮೆ, ಮಗದೊಮ್ಮೆ ನಾವು ನೋಡಿಕೊಂಡೇವು. ಆದ್ದರಿಂದ ವಾಸ್ತವವು ನೆನಪಾಗಿ ಬೆಳೆಯತಕ್ಕ ಸಂಗತಿ ; ಮತ್ತು ಆ ನೆನಪನ್ನು ಕಲಾವಿದನು ಮತ್ತೆ ಜನತೆಯು ನೋಡುವಂತೆ ಮುಂದಿಟ್ಟರೆ ಅದು ವಾಸ್ತವ. ಆದ್ದರಿಂದ ವಾಸ್ತವದಲ್ಲಿ ಅಡಗಿರುವ ಅರಿವನ್ನು, ಕಲ್ಪನೆಯಲ್ಲಿ ಅಡಗಿರುವ ಆನಂದವನ್ನು ಕೊಡಲು ಶಕ್ತನಾದರೆ ಕಲಾವಿದ ಪರಿಪೂರ್ಣನೆನಿಸಿಕೊಂಡಾನು.

---

# ಪ್ರಕಟಣೆ

**ನೃತ್ಯವನ್ನು ಸಿನಿಮಾ ಮಾಧ್ಯಮದಲ್ಲಿ ಬಿಂಬಿಸಲಾಗಿರುವ ಕುರಿತಂತೆ ಮಾಹಿತಿಗಳು, ಅನಿಸಿಕೆ, ದಾಖಲೆಗಳು ಸಂಶೋಧನಾ ಅಧ್ಯಯನವೊಂದಕ್ಕೆ ಬೇಕಾಗಿವೆ. ಮಾಹಿತಿಗಳನ್ನು ಪತ್ರಿಕೆಗೆ ತಲುಪಿಸಿದಲ್ಲಿ 'ನೂಪುರ ಭ್ರಮರಿ' ಅವರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತದೆ. ಈ ಸಂಬಂಧ ಸಹೃದಯರಲ್ಲಿ ಸಿಡಿ, ಡಿವಿಡಿಗಳು ಲಭ್ಯವಿದ್ದಲ್ಲಿ ತಗಲುವ ಖರ್ಚನ್ನು ಭರಿಸಲಾಗುವುದು.**

---

✷ ನೂಪುರ ಭ್ರಮರಿಯ ವೆಬ್‌ಸೈಟ್ ಸಮಗ್ರವಾಗಿ ಅಪ್‌ಡೇಟ್ ಆಗಿರುತ್ತದೆ. ಗಮನಿಸಿ ಪ್ರೋತ್ಸಾಹಿಸಿ, ನಿಮ್ಮ ಅನಿಸಿಕೆಗಳನ್ನು ತಿಳಿಸಿ.

✷ ಭ್ರಮರಿಗೆ ಬರಹಗಳನ್ನು ಕಳಿಸುವವರು ಆಯಾ ತಿಂಗಳ ೨೫ನೇ ತಾರೀಕಿನೊಳಗೆ ಕಳಿಸಿದರೆ ಪರಿಶೀಲನೆ ಮತ್ತು ಪ್ರಕಟಣೆಗೆ ಅನುಕೂಲವಾಗುವುದು. ಮತ್ತಷ್ಟು ನಿಮ್ಮ ವಿಚಾರಗಳು ನಮ್ಮ ಅಂಗಳಕ್ಕೆ ತಲುಪಲಿ, ಭ್ರಮರಿ ಸಮೃದ್ಧವಾಗಲಿ.

✷ ಈ ಬಾರಿಯ ನೂಪುರದ ಮುದ್ರಣ ನಿಧಿಗೆ ಮಡಿಕೇರಿಯ ಬ್ರಾಹ್ಮಣರ ಬೀದಿಯಲ್ಲಿನ 'ಜ್ಯೋತಿ' ಮನೆಯ ನಾರಾಯಣ ಭಟ್, ಶಿವಮೊಗ್ಗದ ಗುರು ಕಲಾವಿದ, ವಿದ್ವಾನ್ ಜನಾರ್ಧನ ಅವರು ಅವರು ದೇಣಿಗೆ ನೀಡಿದ್ದಾರೆ. ಪತ್ರಿಕೆಯ ವತಿಯಿಂದ ಅವರೀರ್ವರಿಗೂ ಮನಃಪೂರ್ವಕ ಧನ್ಯವಾದಗಳು.

## ದರ್ಪಣ

ಕಲಾ ಜಗತ್ತಿನ ಸಾರ್ವಭೌಮರನ್ನು, ಅಸಾಧಾರಣ ಕೊಡುಗೆಗಳನ್ನಿತ್ತ, ಅವಿಸ್ಮರಣೀಯರೆನಿಸಿದ ಮಹಾನ್ ವ್ಯಕ್ತಿತ್ವಗಳನ್ನು, ನೆನಪು ಮಾಡಿಕೊಳ್ಳುವ ಅಂಕಣ. ಕಲೆಗೆ ಅರ್ಪಿಸಿಕೊಂಡು ಬದುಕಿದವರ ಚರಿತೆ. ಆ ಮೂಲಕ ನಮ್ಮ ಹಿಂದಿನ ಹೆಜ್ಜೆಗಳನ್ನು ಮತ್ತೊಮ್ಮೆ, ಮಗದೊಮ್ಮೆ ಹಿಂತಿರುಗಿ ನೋಡಿ ಅವಲೋಕಿಸುವ, ನಮ್ಮನ್ನು ನಾವು ನೋಡಿಕೊಳ್ಳುವ, ಅರಿಯುವ ಪ್ರಯತ್ನ. ಹಾಗಾಗಿಯೇ ಇದು ದರ್ಪಣ.

ಕಲಾ ಜಗತ್ತಿನ ಕೋಮಲ ಕಥೆಗಳಿದ್ದರೆ ನಮಗೆ ಬರೆದು ಕಳಿಸಿ. ನೀವು ಕಂಡುಕೊಂಡ ಆಯಾಮಗಳನ್ನು ಕುಳಿತು ಮೆಲುಕು ಹಾಕೋಣ. ನಿಮ್ಮ ಸಾಲುಗಳು ನೂಪುರದ ನೆನಪಿಗೆ ತೋರಣವಾಗಲಿ. ಏನಂತೀರಾ ?

# ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ

ಇದು ಬ್ರಾಹ್ಮಣ ಕುಲದ ಹೆಣ್ಣು ಮಗಳ ನಿರ್ಧಾರ ಮತ್ತು ದಿಟ್ಟ ನಿಲುವಿನ ಕಥೆ. ನೃತ್ಯಕ್ಕಾಗಿ ಸಮಾಜ, ತನ್ನವರನ್ನು ಎದುರುಹಾಕಿಕೊಂಡು ಇಡೀ ನೃತ್ಯ ಕ್ಷೇತ್ರಕ್ಕಿದ್ದ ಕಳಂಕವನ್ನು ತೊಡೆದು ಕಲೆಯನ್ನು ಪುನರುಜ್ಜೀವನಗೊಳಿಸಿದ ಯಶೋಗಾಥೆ.

ಅದು ಸ್ವಾತಂತ್ರ್ಯಪೂರ್ವ ಕಾಲಘಟ್ಟ. ಒಂದೆಡೆ ಬ್ರಿಟೀಷರ ದಬ್ಬಾಳಿಕೆಗೆ ನಲುಗುತ್ತಿರುವ ಭಾರತೀಯರು. ಇನ್ನೊಂದೆಡೆ ಸೊರಗುತ್ತಿರುವ ಭಾರತೀಯತೆ. ಇವೆರಡರ ನಡುವೆ ಉಳಿದು ಬಂದ ಕಂದಾಚಾರ, ಮೂಢ ನಂಬಿಕೆಗಳು. ಸ್ತ್ರೀಯರ ಬಗೆಗಿದ್ದ ಕರ್ಮಟ ಆಚರಣೆಗಳು. ಸಾಂಸ್ಕೃತಿಕ ಸಂಘರ್ಷಗಳು. ಕಲೆಯೊಂದು ಅಸ್ತಿತ್ವವನ್ನು ಕಳೆದುಕೊಳ್ಳಲು ಇದಕ್ಕಿಂತ ಇನ್ನೇನು ಬೇಕು? ದೇವದಾಸಿ ಪದ್ಧತಿಯೊಂದಿಗೆ ಅಂಟಿಕೊಂಡ ಕಳಂಕದಿಂದಾಗಿ ನೃತ್ಯ ಶೈಲಿಯೊಂದು ನಲುಗುತ್ತಿದ್ದ ಕಾಲ. ಕಲೆಯ ಪುನರುಜ್ಜೀವನ ಕನಸಿನ ಮಾತಾಗಿದ್ದ ಸಂಧಿಗ್ಧ, ಸಂಕಟ ! ದಾರಿ ಯಾವುದಯ್ಯಾ?

ಅವರೇ ರುಕ್ಮಿಣೀ ದೇವಿ ಅರುಂಡೇಲ್. ನೃತ್ಯ ಸಂಸ್ಕೃತಿಗೆ ಅವರಿತ್ತುಹೋದ ಉತ್ತರ ನೃತ್ಯ ಸಂಸ್ಕೃತಿಯ ಪುನರುದ್ಧಾರದ ಪ್ರಥಮ ಮೈಲಿಗಲ್ಲು. ಜನನ ೨೯ ಫೆಬ್ರುವರಿ ೧೯೦೪, ಸಂಸ್ಕೃತ ಕಲಿಕಾಭ್ಯಾಸಿಗಳಿಗೆ ಮುಖ್ಯ ಕೇಂದ್ರವಾಗಿದ್ದ ತಿರುವಿಸ್ಸೈ ನಲ್ಲೂರಿನಲ್ಲಿದ್ದ ಸಂಸ್ಕೃತ ವಿದ್ವಾನ್ ಎ. ನೀಲಕಂಠ ಶಾಸ್ತ್ರಿ ರುಕ್ಮಿಣಿಯ ತಂದೆ. ಸಂಗೀತ ಕಲಿಕೆಯ ಮುಖ್ಯ ಕ್ಷೇತ್ರವಾದ ತಿರುವೈಯಾರುವಿನವರಾದ ಶೇಷಮ್ಮಾಳ್ ತಾಯಿ. ಅಚ್ಚುಕಟ್ಟು ಬ್ರಾಹ್ಮಣ ಮನೆತನದ ಕುಟುಂಬ. ಆದರೆ ಸುಶಿಕ್ಷಿತ ತಂದೆ ತಾಯಿಯರಿಂದಾಗಿ ತನ್ನ ಏಳನೇ ವಯಸ್ಸಿಗೇ ತಂದೆಯೊಂದಿಗೆ ಆ್ಯನಿಬೆಸೆಂಟ್‌ರ





ಥಿಯೋಸೋಫಿಕಲ್ ಸೊಸೈಟಿಯ ಸಂಪರ್ಕಕ್ಕೆ ಬಂದ ರುಕ್ಮಿಣೀಗೆ ವಿವಾಹವಾದದ್ದು ೧೬ ರ ಹರೆಯದಲ್ಲಿ ! ೧೯೨೦ನೇ ಇಸವಿಯ ಕಾಲ. ಮದುವೆಯಾದ ಬೆನ್ನಿಗೇ ಸಮಾಜದ ಪ್ರತಿಭಟನೆ, ಮೂದಲಿಕೆ.. ಕಾರಣ,! ಮದುವೆಯಾದದ್ದಾದರೂ ಯಾರನ್ನು? ತನಗಿಂತಲೂ ಬಹಳಷ್ಟು ಹಿರಿಯ, ವಿದೇಶಿ ಶಿಕ್ಷಣತಜ್ಞ, ವಾರಣಾಸಿ ಸೆಂಟ್ರಲ್ ಹಿಂದೂ ಕಾಲೇಜಿನ ಮಾಜಿ ಪ್ರಾಂಶುಪಾಲ ಡಾ. ಈ. ಎಸ್. ಅರುಂಡೇಲ್. ಆದರೇನು ? ವ್ಯಂಗ್ಯ-ಮೂದಲಿಕೆ, ಕರ್ಮಟ ಆಚಾರಗಳನ್ನು ಮೆಟ್ಟಿ ನಿಂತರು ಈ ಹುಟ್ಟು ಹೋರಾಟಗಾರ್ತಿ !

ನಂತರದ ಹೋರಾಟ...! ಮನಸ್ಸು ಸಿದ್ಧಗೊಂಡಿತ್ತು. ದಶಕವೊಂದರ ಕಾಲ ಮನಸ್ಸು ಚಿಂತನೆಯಲ್ಲಿ ತೊಡಗಿತ್ತು.

ಜನ, ವೇಷ, ಭಾಷೆ, ಜೀವನ ಶೈಲಿಯನ್ನು ಅರಿಯುವ, ಅರಿತು ಬೆರೆಯುವ ಆಸೆ ರುಕ್ಮಿಣಿಗೆ. ಸೊಸೈಟಿಯ ಕೆಲಸದಲ್ಲಿ ಮತ್ತಷ್ಟು ಕ್ರಿಯಾಶೀಲರಾಗಿ ದುಡಿಯುತ್ತಾ ಪ್ರವಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪ್ರವಾಸದುದ್ದಕ್ಕೂ ಜನಜೀವನದ ಸಂಸ್ಕೃತಿ ಮತ್ತು ಸಂಗೀತ ನೃತ್ಯದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ. ಏಕೆಂದರೆ ಅವರನ್ನು ಬಹುವಾಗಿ ಸೆಳೆದದ್ದೇ ಸಂಗೀತ ಮತ್ತು ನೃತ್ಯ.

ಇಂತಹ ಒಂದು ಸಂದರ್ಭದಲ್ಲಿ ಪರಿಚಯವಾದವರೇ ಖ್ಯಾತ ಬ್ಯಾಲೆ ನೃತ್ಯಗಾರ್ತಿ ಅನ್ನಾ ಪಾವಲೋವಾ !

ಆಗ ರುಕ್ಮಿಣಿದೇವಿಗೆ ೨೪ ರ ಹರೆಯ.

ಅದೊಂದು ಬಾರಿ ಅನ್ನಾ ಪಾವಲೋವ ಮುಂಬೈಗೆ ಬಂದರು ! ! ! !

***(ಸಶೇಷ)***

